ಕರ್ನಾಟಕ ಸರ್ಕಾರ

ಸಂಖ್ಯೆ ಸಿಐ 160 ಎಂಎಂಎನ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ 19.03.2020.

1
Stored
20/3/2020

ಇಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ., ಜವಳಿ ಮತ್ತು ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ

ಮಾನ್ಯರೇ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಸಂಜೀವ್ ಮಠಂದೂರ್ (ಪುತ್ತೂರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2691ಕ್ಕೆ ಉತ್ತರ ಒದಗಿಸುವ ಕುರಿತು.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2691/ ದಿನಾಂಕ 09.03.2020.

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ಮಾನ್ಯ ಮಾನ್ಯ ವಿಧಾನ ಸಭೆ ಸದಸ್ಯರಾದ ಸಂಜೀವ್ ಮಠಂದೂರ್ (ಪುತ್ತೂರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2691ಕ್ಕೆ ಸರ್ಕಾರದ ಉತ್ತರದ ಕನ್ನಡ ಭಾಷೆಯ 350 ಹಾಗೂ ಆಂಗ್ಲ ಭಾಷೆ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಶಿವಪ್ರಕಾಶ)
ಪೀಠಾಧಿಕಾರಿ (ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	2691
ಸದಸ್ಯರ ಹೆಸರು	ಶ್ರೀ ಸಂಜೀವ ಮಠಂದೂರು (ಪುತ್ತೂರು)
ಉತ್ತರಿಸಬೇಕಾದ ದಿನಾಂಕ	20.03.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರಸಂ.	ಪ್ರಶ್ನೆಗಳು	ಉತ್ತರ
ಅ.	ಕರಾವಳಿ ಜಿಲ್ಲೆಗಳಲ್ಲಿ ಹೊಸ ಮರಳು ನೀತಿ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿದೆಯೇ?	ರಾಜ್ಯದಲ್ಲಿ ಮರಳು ನೀತಿ ಜಾರಿಗೆ ತರುವ ಕುರಿತು ರೂಪುರೇಷೆಗಳನ್ನು ಸರ್ಕಾರದಿಂದ ಸಿದ್ಧಪಡಿಸಲಾಗುತ್ತಿದೆ.
ಆ.	ಕರಾವಳಿ ಭಾಗದಲ್ಲಿ ಪ್ರಕೃತಿ ವಿಕೋಪದಿಂದ ಹೇರಳವಾಗಿ ಮರಳು ಶೇಖರಣೆಯಾಗಿದ್ದರೂ ಅದನ್ನು ಉಪಯೋಗಿಸಲು ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)	ಸುಸ್ಥಿರ ಮರಳು ಗಣಿಗಾರಿಕೆ ನಿರ್ವಹಣೆ ಮಾರ್ಗಸೂಚಿಗಳು, 2016ರಲ್ಲಿ ಪ್ರವಾಹದಿಂದ ಪಟ್ಟಾ ಜಮೀನುಗಳಲ್ಲಿ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸಲು ಹಾಗೂ ಜಲಾಶಯ / ಅಣೆಕಟ್ಟು / ಬ್ಯಾರೇಜ್ / ಕಿಂಡಿ ಅಣೆಕಟ್ಟಿನ ಹಿನ್ನೀರಿನ ಪ್ರದೇಶಗಳಲ್ಲಿ ಹೂಳಿನೊಂದಿಗೆ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸಲು ಅವಕಾಶಗಳನ್ನು ಕಲ್ಪಿಸಲಾಗಿರುವುದರಿಂದ, ಪ್ರಕೃತಿ ವಿಕೋಪದಿಂದ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸಿ ಉಪಯೋಗಿಸಲು ಸರ್ಕಾರಕ್ಕೆ ಯಾವುದೇ ಸಮಸ್ಯೆಗಳಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ ಸಿಐ 213 ಎಂಎಂಎನ್ 2019, ದಿನಾಂಕ 01.10.2019ರಲ್ಲಿ, ಪ್ರವಾಹದಿಂದ ನದಿಗಳ ಪಕ್ಕದ ಕೃಷಿ ಜಮೀನುಗಳಲ್ಲಿ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸಿ, ಸ್ಥಳೀಯ ಕಾಮಗಾರಿಗಳಿಗೆ ಉಪಯೋಗಿಸಲು ಸರ್ಕಾರದಿಂದ ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ 21 ಹಾಗೂ ಉತ್ತರ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ **01** ಸೇರಿ ಒಟ್ಟು **22** ಪ್ರವಾಹದಿಂದ ಕೃಷಿ ಜಮೀನಿನಲ್ಲಿ ಸಂಗ್ರಹವಾಗಿರುವ ಮರಳನ್ನು ತೆಗೆಯುವ ಪ್ರಸ್ತಾವನೆಗಳಿಗೆ ಆಯಾ ಜಿಲ್ಲೆಗಳ ಜಿಲ್ಲಾ ಮರಳು ಸಮಿತಿಗಳಿಂದ ಅವಕಾಶ ಕಲ್ಪಿಸಲಾಗಿರುತ್ತದೆ.

		ಅದರಂತೆ, ಈವರೆಗೆ ಕರಾವಳಿ ಜಿಲ್ಲೆಗಳಲ್ಲಿ **31,686** ಮೆಟ್ರಿಕ್ ಟನ್ ಮರಳನ್ನು ಪಟ್ಟಾ ಜಮೀನುಗಳಿಂದ ತೆಗೆದು, ಸ್ಥಳೀಯ ಕಾಮಗಾರಿಗಳಿಗೆ ನೀಡಲಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ತುಂಬೆ ಅಣೆಕಟ್ಟಿನ ಹಿನ್ನೀರಿನ ಪ್ರದೇಶದಲ್ಲಿ ಹಾಗೂ ಉಡುಪಿ ಜಿಲ್ಲೆಯ ಬಜೆ ಡ್ಯಾಂ ಹಿನ್ನೀರಿನ ಪ್ರದೇಶದಲ್ಲಿ ಹೂಳು ತೆರವುಗೊಳಿಸಿರುವುದರಿಂದ ಸಂಗ್ರಹವಾಗಿರುವ ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಈವರೆಗೂ ದಕ್ಷಿಣ ಕನ್ನಡ ಜಿಲ್ಲೆಯ ತುಂಬೆ ಅಣೆಕಟ್ಟಿನ ಹಿನ್ನೀರಿನ ಪ್ರದೇಶದಲ್ಲಿ **79,000** ಮೆಟ್ರಿಕ್ ಟನ್ ಹಾಗೂ ಉಡುಪಿ ಜಿಲ್ಲೆಯ ಬಜೆ ಡ್ಯಾಂ ಹಿನ್ನೀರಿನ ಪ್ರದೇಶದಲ್ಲಿ **10,370** ಮೆಟ್ರಿಕ್ ಟನ್ ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ. ಮುಂದುವರೆದು, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ ಆದ್ಯಾಪಾಡಿ ಅಣೆಕಟ್ಟು ಮತ್ತು ಎ.ಎಂ.ಆರ್. ಡ್ಯಾಂ ಪ್ರಾಜೆಕ್ಟ್‌ನ ಹಿನ್ನೀರಿನ ಪ್ರದೇಶದಲ್ಲಿ ಹೂಳಿನೊಂದಿಗೆ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸಲು ಜಿಲ್ಲಾ ಮರಳು ಸಮಿತಿ, ದಕ್ಷಿಣ ಕನ್ನಡ ಇವರು ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯ ಕೋರಿರುತ್ತಾರೆ. ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯ ಬಂದ ನಂತರ ಸದರಿ ಅಣೆಕಟ್ಟುಗಳಲ್ಲಿ ಹೂಳನ್ನು ತೆಗೆದು, ಸದರಿ ಹೂಳಿನಲ್ಲಿ ನಿರ್ಮಾಣ ಕಾಮಗಾರಿಗಳಿಗೆ ಯೋಗ್ಯವಾದ ಮರಳಿದ್ದಲ್ಲಿ, ಅದನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲು ಕ್ರಮ ವಹಿಸಲಾಗುತ್ತದೆ.

ಸಂಖ್ಯೆ: ಸಿಐ 160 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 65 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:19.03.2020

OA
Stand
20/3/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಘುಮೂರ್ತಿ ಟಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2245 ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ರಘುಮೂರ್ತಿ ಟಿ. ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2245 ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್. ದಿವಾಕರ್)
ಶಾಖಾಧಿಕಾರಿ,
ಮಂಡಳಿ ಶಾಖೆ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2245
ಸದಸ್ಯರ ಹೆಸರು	:	ಶ್ರೀ ರಘುಮೂರ್ತಿ ಟಿ. (ಚಳ್ಳಕೆರೆ)
ಉತ್ತರಿಸಬೇಕಾದ ದಿನಾಂಕ	:	20.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು.

****

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ನಗರಸಭೆಯ ಯು.ಜಿ.ಡಿ ಕಾಮಗಾರಿಗೆ ವಾಯುಮಾಲಿನ್ಯ ಮಂಡಳಿ 10 ಪಿ.ಪಿ.ಎಂ. ನಿಗದಿಪಡಿಸಿರುವ ಪ್ರಕಾರ ರೂ.181 ಕೋಟಿ ಅಂದಾಜು ಪಟ್ಟಿಯನ್ನು ತಯಾರಿಸಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಚಳ್ಳಕೆರೆ ನಗರಕ್ಕೆ ಒಳಚರಂಡಿ ಕಲ್ಪಿಸುವ ಯೋಜನೆಯ ರೂ.112.20 ಕೋಟಿಗಳ ಮೊತ್ತದ ಅಂದಾಜು ಪಟ್ಟಿಯು ಆಡಳಿತಾತ್ಮಕ ಅನುಮೋದನೆಗಾಗಿ ದಿನಾಂಕ 23.07.2015 ರಂದು ಸ್ವೀಕೃತವಾಗಿತ್ತು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಅನುದಾನದ ಕೊರತೆ ಇರುವ ಕಾರಣ ಮುಂದಿನ 2 ಆರ್ಥಿಕ ವರ್ಷಗಳವರೆಗೆ ಯಾವುದೇ ಹೊಸ ಯೋಜನೆಗಳನ್ನು ಕೈಗೊಳ್ಳದಿರುವಂತೆ ಸೂಚಿಸಿ ಅಂದಾಜು ಪಟ್ಟಿಯನ್ನು ಮಂಡಳಿಗೆ ಹಿಂದಿರುಗಿಸಲಾಗಿತ್ತು. ಈ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2019-20ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಅವಕಾಶ ಕಲ್ಪಿಸಿ, ಸದರಿ ಒಳಚರಂಡಿ ಯೋಜನೆಯ ಅಂದಾಜು ಪಟ್ಟಿಯಲ್ಲಿ ಪರಿಸರ ಮಾಲಿನ್ಯ ಮಂಡಳಿಯ ಹೊಸ ಮಾರ್ಗಸೂಚಿಗಳನ್ವಯ ಎಸ್.ಬಿ.ಆರ್ ತಂತ್ರಜ್ಞಾನದ ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಾಣಕ್ಕೆ ಅನುವು ಮಾಡಿಕೊಂಡು ರೂ.186.00 ಕೋಟಿಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಸದರಿ ಅಂದಾಜು ಪಟ್ಟಿಯು ಮಂಡಳಿಯ ಹಂತದಲ್ಲಿ ಪರಿಶೀಲನೆಯಲ್ಲಿದೆ.
ಆ)	ಬಂದಿದ್ದಲ್ಲಿ, ಆರ್ಥಿಕ ಇಲಾಖೆಯಿಂದ ಸಹಮತಿ ದೊರೆಯದೆ ಕಾಮಗಾರಿ ಪ್ರಾರಂಭ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ)	ಬಂದಿದ್ದಲ್ಲಿ, ಶೀಘ್ರವಾಗಿ ಚಳ್ಳಕೆರೆ ನಗರಕ್ಕೆ ಯು.ಜಿ.ಡಿ ಕಾಮಗಾರಿಗಾಗಿ ಅಂದಾಜು ಮೊತ್ತದ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು (ಪೂರ್ಣ ವಿವರ ನೀಡುವುದು)?	

ಸಂಖ್ಯೆ: ನಅಇ 65 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

File No. CI/64/IAP/2020-ID-C&I SEC

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 64 ಐಎಪಿ(ಇ) 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 19.03.2020.

03
Starred
20/03/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ (ಪ್ರ),
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಡಾ|| ಶ್ರೀನಿವಾಸಮೂರ್ತಿ (ನೆಲಮಂಗಲ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2479ಕ್ಕೆ ಉತ್ತರಿಸುವ ಕುರಿತು.

---*---

ಮಾನ್ಯ ವಿಧಾನ ಸಭೆ ಸದಸ್ಯರಾದ ಡಾ|| ಶ್ರೀನಿವಾಸಮೂರ್ತಿ (ನೆಲಮಂಗಲ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2479ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಎನ್. ಕುಮಾರ್

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

19/3/2020

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2479
2. ಸದಸ್ಯರ ಹೆಸರು : ಡಾ॥ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
3. ಉತ್ತರಿಸುವ ದಿನಾಂಕ : 20.03.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸೋಂಪುರ ಕೈಗಾರಿಕಾ ಪ್ರದೇಶದಲ್ಲಿ ಬಿ.ಪಿ.ಎಲ್ ಕಂಪನಿಗೆ ಮಂಜೂರು ಮಾಡಿರುವ ಜಮೀನಿನ ವಿಸ್ತೀರ್ಣವೆಷ್ಟು, ಕಂಪನಿಯು ಸದರಿ ಜಮೀನಿನಲ್ಲಿ ಉಪಯೋಗ ಮಾಡಿಕೊಂಡಿರುವ ವಿಸ್ತೀರ್ಣವೆಷ್ಟು;	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನೆಲಮಂಗಲ ವಿಧಾನಸಭಾ ಕ್ಷೇತ್ರದ ದಾಬಸ್‌ಪೇಟೆ 1ನೇ ಹಂತದ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ: 1 ಮತ್ತು 2–ಪಾರ್ಟ್ ರಲ್ಲಿ ಒಟ್ಟು 149 ಎಕರೆ 5.5 ಗುಂಟೆ ಜಮೀನನ್ನು ಮೆ॥ ಬಿ.ಪಿ.ಎಲ್ ಲಿ.ರವರಿಗೆ ಹಂಚಿಕೆ ಮಾಡಲಾಗಿದೆ. ಸದರಿ ಕಂಪನಿಯು ಹಂಚಿಕೆ ಪಡೆದಿರುವ ವಿಸ್ತೀರ್ಣದಲ್ಲಿ ಶೇಕಡಾ 5.12ರಷ್ಟು ಜಮೀನನ್ನು ಕಟ್ಟಡಕ್ಕಾಗಿ ಬಳಸಿಕೊಂಡಿರುತ್ತದೆ.
ಆ.	ಕಟ್ಟಡವನ್ನು ನಿರ್ಮಾಣ ಮಾಡಿರುವ ವಿಸ್ತೀರ್ಣವೆಷ್ಟು ಹಾಗೂ ಕಂಪನಿಯು ಸದರಿ ಜಮೀನಿನ ಪೈಕಿ ಮಾರಾಟ ಮಾಡಿರುವ ವಿಸ್ತೀರ್ಣದ ಜಾಗವೆಷ್ಟು;	ಮೆ॥ ಬಿ.ಪಿ.ಎಲ್. ಲಿ. ಕಂಪನಿಯು ಹಂಚಿಕೆ ಪಡೆದಿರುವ ವಿಸ್ತೀರ್ಣದಲ್ಲಿ ಶೇಕಡಾ 5.12ರಷ್ಟು ಜಮೀನನ್ನು ಕಟ್ಟಡಕ್ಕಾಗಿ ಬಳಸಿಕೊಂಡಿರುತ್ತದೆ. ಕೆ.ಐ.ಎ.ಡಿ.ಬಿ.ಯು ದಿನಾಂಕ: 28.11.2006ರಂದು ಶುದ್ಧ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತದೆ. ಕೆ.ಐ.ಎ.ಡಿ.ಬಿ.ಯಿಂದ ಕ್ರಯಪತ್ರ ಪಡೆದ ನಂತರ ಮೆ॥ ಬಿ.ಪಿ.ಎಲ್ ಲಿ.ರವರು ಈ ಕೆಳಕಂಡ ಸಂಸ್ಥೆಗಳಿಗೆ ಜಮೀನನ್ನು ಮಾರಾಟ ಮಾಡಿದ್ದು, ಈ ಕಂಪನಿ / ಘಟಕಗಳು ಕಾರ್ಯನಿರ್ವಹಿಸುತ್ತಿವೆ.
ಇ.	ಪ್ರಸ್ತುತದಲ್ಲಿ ಸದರಿ ಸಂಸ್ಥೆಯು ಕಾರ್ಯನಿರ್ವಸುತ್ತಿದೆಯೇ? (ವಿವರ ನೀಡುವುದು)	

ಕ್ರ. ಸಂ	ಕಂಪನಿ ಹೆಸರು	ವಿಸ್ತೀರ್ಣ (ಎ-ಗುಂ)
1	ಮೆ॥ ಮಾರುತಿ ಸುಜುಕಿ ಇಂಡಿಯಾ ಲಿ.	33-14
2	ಮೆ॥ ಮಾರುತಿ ಸುಜುಕಿ ಇಂಡಿಯಾ ಲಿ.	87-13.10
3	ಮೆ॥ ಜಿಂದಾಲ್ ಅಲ್ಯುಮಿನಿಯಮ್ ಲಿ.	25-5.5
4	ಮೆ॥ ಬಿ.ಓ.ಸಿ. ಇಂಡಿಯಾ ಲಿ. / ಲಿಂಡೆ ಇಂಡಿಯಾ ಲಿ.	3-12.90

ಸಂಖ್ಯೆ: ಸಿಐ 64 ಬಿಎಪಿ(ಇ) 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ : ಸಇ 151 ಎಂಆರ್‌ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:19.03.2020

4
Stored
20/3/2020

ಇವರಿಂದ :

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬಹುಮಹಡಿಕಟ್ಟಡ,
ಬೆಂಗಳೂರು.

ಇವರಿಗೆ :

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ : ಕರ್ನಾಟಕ ವಿಧಾನಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2709ಕ್ಕೆ ಉತ್ತರಿಸುವ ಬಗ್ಗೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2709ಕ್ಕೆ ದಿನಾಂಕ:20.03.2020ರಂದು ಉತ್ತರಿಸಬೇಕಾಗಿದ್ದು, ಕನ್ನಡ ಭಾಷೆಯ 350 ಮತ್ತು ಆಂಗ್ಲ ಭಾಷೆಯ 25 ಉತ್ತರಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ ಹಾಗೂ ಉತ್ತರವನ್ನು ಪಿ.ಡಿ.ಎಫ್. ಮಾದರಿಯಲ್ಲಿ ಇ–ಮೇಲ್ ವಿಳಾಸ: dsqb-kla-kar@nic.inರ ಮೂಲಕ ಸಹ ಕಳುಹಿಸಿದೆ.

ತಮ್ಮ ನಂಬುಗೆಯ,

(ಬಿ.ಎಸ್.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಸಹಕಾರ ಇಲಾಖೆ.

19/3

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2709
2. ಮಾನ್ಯ ವಿಧಾನ ಸಭಾ ಸದಸ್ಯರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್
3. ಉತ್ತರಿಸಬೇಕಾದ ದಿನಾಂಕ : 20.03.2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೀದರ್‌ನಲ್ಲಿ ರಾಜ್ಯ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ತೊಗರಿಕಾಳು, ಖರೀದಿ ಮಿತಿಯನ್ನು ಪ್ರತಿ ರೈತರಿಂದ 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ಗಳಿಗೆ ಖರೀದಿ ಮಿತಿಯನ್ನು ಹೆಚ್ಚಳ ಮಾಡಲಾಗುವುದೆಂದು ಘೋಷಣೆ ಮಾಡಿರುವುದು ನಿಜವೇ;	ಖರೀದಿ ಮಿತಿಯನ್ನು 20 ಕ್ವಿಂಟಾಲ್‌ಗೆ ಹೆಚ್ಚಿಸಲಾಗಿರುವುದಿಲ್ಲ.
ಆ	ಹಾಗಿದ್ದಲ್ಲಿ, ಪ್ರತಿ ರೈತರಿಂದ 20 ಕ್ವಿಂಟಾಲ್‌ನಂತೆ ತೊಗರಿ ಖರೀದಿ ಮಾಡಲಾಗುತ್ತಿದೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು; (ವಿವರ ನೀಡುವುದು)	ಕೇಂದ್ರ ಸರ್ಕಾರವು 2019-20ರ ಮುಂಗಾರು ಹಂಗಾಮಿಗೆ ಎಫ್.ಎ.ಕ್ಯೂ. ಗುಣಮಟ್ಟದ ತೊಗರಿ ಉತ್ಪನ್ನಕ್ಕೆ ರೂ.5800/- ಪ್ರತಿ ಕ್ವಿಂಟಾಲಿಗೆ ಬೆಂಬಲ ಬೆಲೆ ಘೋಷಿಸಿದೆ. ಮಾರುಕಟ್ಟೆ ಧಾರಣೆ ಇದಕ್ಕಿಂತಲೂ ಕಡಿಮೆ ಇರುವ ಕಾರಣ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಸಲು ರಾಜ್ಯ ಸರ್ಕಾರದಿಂದ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದರನ್ವಯ ಕೇಂದ್ರ ಸರ್ಕಾರವು ದಿನಾಂಕ:17.12.2019ರ ಪತ್ರದಲ್ಲಿ ಗರಿಷ್ಟ 1,82,875 ಮೆ.ಟನ್ ಖರೀದಿ ಪ್ರಮಾಣವನ್ನು ನಿಗಧಿಪಡಿಸಿ, ಖರೀದಿ ಸಂಸ್ಥೆಯಾದ ನಾಫೆಡ್ ಮೂಲಕ ಖರೀದಿಸಲು ಅನುಮೋದನೆ ನೀಡಲಾಗಿರುತ್ತದೆ. ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಬೆಲೆ ಸ್ಥಿರೀಕರಣದ ಸಚಿವ ಸಂಪುಟ ಉಪ ಸಮಿತಿಯು, ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಗರಿಷ್ಟ 1,82,875 ಮೆಟ್ರಿಕ್ ಟನ್ ಖರೀದಿ ಪ್ರಮಾಣವು, ರಾಜ್ಯದಲ್ಲಿನ ಉತ್ಪಾದನೆಯ ಶೇಕಡ 16 ರಷ್ಟು ಒಳಗೊಳ್ಳುವ ಅಂಶ ಹಾಗೂ ರೈತರ ಹಿತ ಕಾಪಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಪ್ರತಿ ಕ್ವಿಂಟಾಲಿಗೆ ರೂ.5800/-ರಂತೆ ನಿಗಧಿಪಡಿಸಿದ್ದು ಇದರ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ರೂ.300/-ರಂತೆ ಪ್ರೋತ್ಸಾಹಧನ ಸೇರಿ ಪ್ರತಿ ಕ್ವಿಂಟಾಲ್‌ಗೆ ರೂ.6100/-ರಂತೆ ಗರಿಷ್ಟ ಪ್ರತಿ ರೈತರಿಂದ ಗರಿಷ್ಟ 10 ಕ್ವಿಂಟಾಲ್ ತೊಗರಿ ಖರೀದಿಗೆ ನಿರ್ಣಯ ಕೈಗೊಂಡಿದೆ. ತೊಗರಿ ಖರೀದಿ ಮಿತಿಯನ್ನು 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ಗೆ ಹೆಚ್ಚಿಸುವ ಕುರಿತಂತೆ ಪರಿಶೀಲಿಸಿ, ಕೇಂದ್ರ ಸರ್ಕಾರವು ಈ ಹಿಂದೆ ನಿಗಧಿಪಡಿಸಿದ್ದ ಗರಿಷ್ಟ ಮಿತಿಯನ್ನು 1,82,875 ಮೆಟ್ರಿಕ್ ಟನ್‌ನಿಂದ 7.5 ಲಕ್ಷ ಮೆಟ್ರಿಕ್ ಟನ್‌ಗೆ ಹೆಚ್ಚಿಸುವಂತೆ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. (ಅನುಬಂಧ-1)

....2

		ಕೇಂದ್ರ ಸರ್ಕಾರವು ಗರಿಷ್ಠ ಖರೀದಿ ಪ್ರಮಾಣವನ್ನು 1,82,875 ಮೆಟ್ರಿಕ್ ಟನ್‌ನಿಂದ 2,27,500 ಮೆಟ್ರಿಕ್ ಟನ್‌ಗೆ ಹೆಚ್ಚಿಸಿ ಅನುಮೋದನೆ ನೀಡಿರುತ್ತದೆ. (ಅನುಬಂಧ-2) ಇದರ ಜೊತೆಗೆ, Price Stabilization Fund (ಬಫರ್ ಸ್ಟಾಕ್) ಯೋಜನೆಯಡಿಯಲ್ಲಿ 3.58 ಲಕ್ಷ ಮೆಟ್ರಿಕ್ ಟನ್ ತೊಗರಿಯನ್ನು ಖರೀದಿಸಲು ಅನುಮೋದನೆ ನೀಡಲು, ಮತ್ತು ಈ ಯೋಜನೆಯಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಪಾವತಿಸಬೇಕಾದ ಮಾರುಕಟ್ಟೆ ಶುಲ್ಕ ವಿನಾಯಿತಿ ನೀಡುವುದಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ ಮೇರೆಗೆ ಕೇಂದ್ರ ಸರ್ಕಾರವು ದಿನಾಂಕ:12.03.2020ರ ಪತ್ರದಲ್ಲಿ 1.00 ಲಕ್ಷ ಮೆಟ್ರಿಕ್ ಟನ್ ಹೆಚ್ಚುವರಿ ತೊಗರಿ ಖರೀದಿಗೆ ಅನುಮೋದನೆ ನೀಡಿರುತ್ತದೆ (ಅನುಬಂಧ-3)
ಇ	ಇದುವರೆಗೂ ಬೆಂಬಲ ಬೆಲೆ ಯೋಜನೆಯಡಿ ಮಾರಾಟ ಮಾಡಲು ನೋಂದಾವಣೆ ಮಾಡಿದ ರೈತರ ಸಂಖ್ಯೆ ಎಷ್ಟು; ಎಷ್ಟು ರೈತರಿಂದ ಖರೀದಿ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)	❖ ದಿನಾಂಕ:25.02.2020ರ ಅಂತ್ಯಕ್ಕೆ ರೈತ ನೋಂದಣಿ ಕಾರ್ಯ ಮುಕ್ತಾಯಗೊಂಡಿದ್ದು, ಒಟ್ಟಾರೆ 3,17,976 ರೈತರು ನೋಂದಣಿ ಮಾಡಿಕೊಂಡಿರುತ್ತಾರೆ. ❖ ದಿನಾಂಕ:17.03.2020ರ ಅಂತ್ಯಕ್ಕೆ 24,76,563 ಕ್ವಿಂಟಾಲ್ ತೊಗರಿಯನ್ನು ಒಟ್ಟು 2,74,977 ರೈತರಿಂದ ಖರೀದಿಸಲಾಗಿರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-4ರಲ್ಲಿ ಒದಗಿಸಿದೆ)
ಈ	ಬಾಕಿ ಖರೀದಿ ಮಾಡಬೇಕಾಗಿರುವ ತೊಗರಿಯ ಪ್ರಮಾಣವೆಷ್ಟು; ರಾಜ್ಯದಲ್ಲಿ ತೆರೆದಿರುವ ತೊಗರಿ ಖರೀದಿ ಕೇಂದ್ರಗಳು ಯಾವುವು; (ವಿವರ ನೀಡುವುದು)	➢ ನೋಂದಣಿಯಾದ ರೈತರ ಪೈಕಿ 42,999 ರೈತರಿಂದ ತಲಾ 10 ಕ್ವಿಂಟಾಲ್‌ನಂತೆ ಅಂದಾಜು 4,29,990 ಕ್ವಿಂಟಾಲ್ ಖರೀದಿ ಬಾಕಿ ಉಳಿದಿರುತ್ತದೆ. ➢ ರಾಜ್ಯದಲ್ಲಿ ಒಟ್ಟಾರೆ 487 ಖರೀದಿ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. (ಖರೀದಿ ಕೇಂದ್ರಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-4ರಲ್ಲಿ ಸಲ್ಲಿಸಿದೆ)
ಉ	ಪ್ರತಿ ರೈತರಿಂದ 20 ಕ್ವಿಂಟಾಲ್‌ನಂತೆ ಯಾವಾಗ ಖರೀದಿ ಮಾಡಲಾಗುವುದು; (ವಿವರ ನೀಡುವುದು)	ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ (PSS) ಯೋಜನೆಯಡಿ 2,27,500 ಮೆಟ್ರಿಕ್ ಟನ್ ಮತ್ತು Price Stabilization Fund (ಬಫರ್ ಸ್ಟಾಕ್) ಯೋಜನೆಯಡಿಯಲ್ಲಿ 1 ಲಕ್ಷ ಮೆಟ್ರಿಕ್ ಟನ್ ತೊಗರಿಯನ್ನು ರೈತರಿಂದ ಖರೀದಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ರಾಜ್ಯದಲ್ಲಿ ಒಟ್ಟು 3,17,976 ರೈತರು ತೊಗರಿ ಮಾರಾಟ ಮಾಡಲು ನೋಂದಣಿ ಮಾಡಿರುತ್ತಾರೆ. ನೋಂದಣಿಯಾದ ಎಲ್ಲಾ ರೈತರಿಗೂ ಯೋಜನೆಯ ಪ್ರಯೋಜನ ಒದಗಿಸುವ ಸದುದ್ದೇಶದಿಂದ, ಪ್ರತಿ ರೈತರಿಂದ ಗರಿಷ್ಠ 10 ಕ್ವಿಂಟಾಲ್ ತೊಗರಿ ಖರೀದಿಸಲಾಗುತ್ತಿದೆ.

.....3

ಊ	ಕೆಲವು ತೊಗರಿ ಕೇಂದ್ರಗಳಲ್ಲಿ ಅಕ್ರಮವಾಗಿ ರೈತರಿಂದ ಹೆಚ್ಚುವರಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಹೌದು. ವಿಜಯಪುರ ಜಿಲ್ಲೆಯ ಈ ಕೆಳಕಂಡ ಎರಡು ಸಹಕಾರ ಸಂಘಗಳಲ್ಲಿ ದೂರುಗಳು ಸ್ವೀಕೃತವಾಗಿರುತ್ತವೆ. 1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅಸಂತಪುರನಲ್ಲಿ ತೂಕದಲ್ಲಿ ಮೋಸ ಮಾಡುತ್ತಿರುವ ಬಗ್ಗೆ ದೂರು ಬಂದಿದೆ. ತೂಕ ಮತ್ತು ಮಾಪನ ಶಾಸ್ತ್ರ ಇಲಾಖೆಯವರು ದೂರು ದಾಖಲಿಸಿಕೊಂಡು ವಿಚಾರಣೆ ಕೈಗೊಂಡಿರುತ್ತಾರೆ. 2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹೂವಿನ ಹಿಪ್ಪರಗಿಯಲ್ಲಿ ರೈತರಿಂದ ಹಣ ವಸೂಲು ಮಾಡುತ್ತಿದ್ದ ಬಗ್ಗೆ ಭ್ರಷ್ಟಾಚಾರ ನಿಗ್ರಹದಳ (ACB) ವಿಜಯಪುರ ಇವರು ದಾಳಿ ಮಾಡಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಈ ಮೇಲ್ಕಂಡ ಸಹಕಾರ ಸಂಘಗಳನ್ನು ಕಪ್ಪು ಪಟ್ಟಿಗೆ ಸೇರಿಸಿ ಮುಂದಿನ ಸಾಲಿನಿಂದ ಖರೀದಿ ಕಾರ್ಯಕ್ಕೆ ತೊಡಗಿಸಿಕೊಳ್ಳದಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗಿದೆ. ಸಹಕಾರ ಸಂಘಗಳ ಉಪ ನಿಬಂಧಕರು ವಿಜಯಪುರ ಇವರು ಮೇಲ್ಕಂಡ ಎರಡು ಸಂಘಗಳಿಗೆ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಅನುಸಾರ ನೋಟೀಸ್ ನೀಡಿದ್ದು, ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಸಇ 151 ಎಂಆರ್ಇ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

Karnataka Legislative Assembly

1. Starred Question No : 2709
2. Name of the Member : Sri. Yeshwantaraya Gowda Vittalagowda Patil
3. Date of answering : 20-3-2020
4. Minister who replies : Minister for Co-Operation

Sl.No	Question	Answer
A	Whether it is true that, announcement has been made in Bidar regarding enhancement of procurement limit for Tur dal from 10 to 20 quintals per farmer under State Government Price Support Scheme;	Procurement limit is not been increased to 20 quintals.
B	If so, whether 20 quintals of tur per farmer is being procured; if not, reasons for the same; (give details)	Central Government has announced Rs.5800/- per quintal as Minimum Support price for Tur of F.A.Q quality for the year 2019-2020. Since the market price is much below the said price, proposal from state government has been submitted to the Central Government to purchase Tur under Minimum Support Price scheme. Accordingly, Central Government vide its letter dated 17.12.2019 has accorded approval to procure to a maximum limit of 1, 82,875 through NAFED. In the Agricultural and Horticultural Price Stabilization Sub-committee, decision was taken to procure maximum limit of 1, 82,875 Metric ton of Central Government share which is 16% of the State production, and for the benefit of the farmers, Central Government has announced Rs.5800/- per quintal as Minimum Support price for Tur of F.A.Q quality additionally support price of Rs 300/- from the State Government was needed and also decision was taken to purchase maximum of 10 quintals per farmer. To increase the procurement limit from 10 quintals to 20 quintals, honble Chief Minister has requested the Central Government to increase the present maximum limit of 1,82,875 Metric ton to 7.5 lakh Metric ton (Annexur-1). Accordingly, Central Government has accorded approval to increase the maximum limit from 1,82,875 Metric ton to 2,27,500 (Annexure 2). Apart from these, when the proposal was submitted to procure 3.58 lakhs Metric ton under Price Stabilization Fund (Buffer stock) scheme and also exemption from the payment of fees to Agricultural marketing committee under the said scheme, Central Government has accorded approval to procure 1.00 lakhs Metric ton of additional Tur vide letter dated 12.03.2020. (Annexure-3)

...2

C	So far, how many farmers have been registered under Price Support Scheme; from how many farmers tur procured; (district wise details to be given)	❖ Registration of farmers has ended on 25-2-2020. ❖ Totally, 3,17,976 farmers are registered. ❖ As on 17-3-2020, 24,76,563 quintals of tur has been procured from 2,74,977 farmers. (District wise details are given in Annexure-4)
D	What is quantity of tur to be yet procured; how many procurement centres have been opened in the State; (give details)	➢ Out of the registered farmers, 4,29, 990 quintals of tur procurement is pending in respect of 42,999 farmers with a limit of 10 quintals per farmer. ➢ Totally 487 procurement centres have been opened in the State. (District wise details are furnished in Annexure-4).
E	When 20 quintals of tur from each farmer will be procured; (give details)	GoI has accorded approval for procurement of 2,27,500 MTs of Tur under Price support Scheme (PSS) and 1 Lakh MTs under Price stabilization Fund (Buffer Stock). Totally 3,17,976 farmers are registered in this state and 10 quintals of Tur per farmer will be procured. The procurement of tur is under process.
F	Whether it has come to the notice of the Government, that illegal collection of money from farmers in some centres are taking place; if so, what action is taken by the Government in this regard? (give details)	Yes. This has come to the notice of Government. Complaints have been received against the below mentioned PACS in Vijayapura District: 1. Complaint has been received at Asantapura PACS regarding under weighment and Legal metrology Department officers have raided and registered a complaint Against the society . They have initiated the enquiry.
		2. ACB officers, Vijayapura, have raided a PACS at Huvina Hipparagi for illegal gratification of money from the farmers. A case has been registered. Direction has been given to the concerned authorities to mark the above societies as black listed and not to consider them in future procurement process. Deputy registrar of Co-operative societies, Vijayapura has issued notice to the above mentioned PACS under Co-operative societies Act & Rules, and the enquiry is under progress.

File No.: CO 151 MRE 2020

S.T. Somashekar (signature)

(S.T. Somashekar)
Minister for Co-Operation

ಅನುಬಂಧ-1

B.S. YEDIYURAPPA
CHIEF MINISTER

VIDHANA SOUDHA
BENGALURU - 560 001

Date : 31.01.2020

CM/64/GOI/2020

Shri Narendra Singh Tomarji,

Sub: Request for enhancement of procurement limit of Tur under Price Support Scheme in Karnataka State.

Ref: 1) GOI letter no: F.No.L-15016/110/2019-MPS, Dated: 17.12.2019.

****

At the outset, I would like to thank you for the permission accorded for procurement of 1,82,875 MTs of Tur through NAFFD under Price Support Scheme in the State of Karnataka during 2019-20.

In furtherance to this sanction, I would like to bring to your kind notice that during 2019-20, Karnataka had a record sown area of 13.35 lakh hectares of Tur with an anticipated production of 12.02 lakh MTs. Karnataka witnessed severe drought and floods during 2019, in spite of that, we have a bumper Tur crop during the kharif-Season 2019.

The present ceiling fixed for the procurement of Tur will cover only about 16% of the State production. So far, 2,39,480 farmers have been registered with the procurement agencies for sale of Tur in the State and registration is going on, it may reach more than 3 lakh farmers.

Currently, the state government has fixed a ceiling of 10 Quintals per farmer, and as per the expected farmers registration present ceiling which will cover 3 Lakhs MTs. There is an earnest request and protest from the farmers in the Tur growing districts of the state to consider procuring 25 Quintals per farmer. Unless the government procures 25 Quintals per farmer at the prevailing MSP rate, the farmer's interest will not be protected.

1.82
7.5

Based on the need, the state government requests you to concur to procure 25 Quintals per farmer and based on the expected farmer registration, the total quantity to be procured could come to around 7.5 Lakh MTs.

Therefore, it is requested to enhance the ceiling limit of procurement from 1.82 Lakh MTs to 7.50 lakh MTs, which will help the afffected registered farmers and to stabilize the price of Tur in the market and thus to avail the benefit of the Price Support Scheme of Govt. of India.

With Best Wishes,

Yours sincerely

ಬಿ.ಎಸ್. ಯಡಿಯೂರಪ್ಪ
(B.S.Yediyurappa)

Shri Narendra Singh Tomarji
Hon'ble Union Minister for Agriculture,
Govt. of India, New Delhi.

ಅನುಬಂಧ - 2.

Government of India
Ministry of Agriculture & Farmers Welfare
Department of Agriculture, Cooperation & Farmers Welfare
Cooperation Division

324

Krishi Bhawan, New Delhi
Dated the 11th February, 2020

To,

The Managing Director,
NAFED,
Siddhartha Enclave,
Ashram Chowk,
New Delhi.

The Managing Director,
SFAC,
5th Floor, NCUI Auditorium,
August Kranti Marg, Hauz Khas,
New Delhi – 110 016.

The Chairman and Managing Director
Food Corporation of India,
16-20, Barakhamba Lane,
New Delhi.

The Managing Director,
NCCF,
NCUI Complex, 3,Siri Institutional Area,
August Kranti Marg, New Delhi-16

Subject: Enhancement of procurement quantity of Red Gram under Price Support Scheme (PSS) in Karnataka for Kharif 2019-20 season– reg.

Sir,

This is in continuation to this Department's letter of even no. dated 17th December, 2019 and Government of Karnataka letter no. CO 228 MRE 2019 (P-2) dated 04.02.2020 (copy enclosed) on the subject cited above and to convey the approval of this Department to enhance the procurement quantity of Red Gram (Tur) under PSS in Karnataka during Kharif 2019-20 season upto the maximum quantity of 2,27,500 MT. The other terms and conditions will remain the same issued vide this Department's sanction letter of even no. dated 17th December, 2019.

2. This issue with the approval of competent Authority.

Encl.: As above.

Yours sincerely,

(Sudhir Bhushan)
Director (MPS)
Tel. 23381385

Copy to: 1. Dr. N. [illegible] Devi, Principal Secretary to Government, Cooperation Department, Government of Karnataka, [illegible] Building, Banglore-560001.

2. State Bank of India, [illegible] Floor, [illegible]

ಅನುಬಂಧ - 3

202

PS-02001/1/2020-PMC Part 1
Government of India
Ministry of Consumer Affairs, Food & Public Distribution
Department Consumer Affairs
Price Monitoring Division

Room No.374, Krishi Bhawan, New Delhi
12th March, 2020

OFFICE MEMORANDUM

Subject: Request for sanctioning of procurement of Tur Dal under Price Stabilization Fund (Buffer Stock Scheme) in Karnataka State – reg.

The undersigned is directed to refer to Chief Secretary, Government of Karnataka letter dated 09.03.2020 on the subject mentioned above and to convey the approval of this Department for procurement of upto 1 Lakh MT Tur during 2019-20 in the State of Karnataka at Minimum Support Price (MSP) under Price Stabilization Fund (PSF) as per PSF Operational Guidelines with exemption of Market Fee as proposed by Karnataka.

2. The designated agency should verify and ensure storage in scientific storage space accredited by WDRA, to the extent feasible. Procurement should be as per FAQ norms under PSF. Day to day monitoring of procurement and storage activities may be monitored by the Coordination Committee under Chairmanship of MD, NAFED.

3. Designated agency to submit suitable proposal with tentative cost structure for soliciting interest free-advance w.r.t. aforesaid operations to facilitate operations. Designated agency shall maintain a separate account for financial flows in this regard and ensure financial prudence. The agency shall regularly furnish detailed physical and financial progress report, reconcile Fund of PSF operations on a monthly basis and submit final audited accounts of aforesaid PSF operations along with the supporting documents to DoCA where all the quantity of pulses procured in a crop season has been completely disposed of, for vetting of losses, within 3 months of such completed disposal for final settlement of claims.

4. Given the time sensitivity of fresh arrivals of Tur, State Government is requested to issue necessary instructions for timely and smooth procurement to avoid distress sale of Tur by Farmers.

5. This issues with the approval of the Competent Authority.

(Abhay Kumar)
Director
Tel : 23388317
Email: k.abhay@gov.in

1. CMD, FCI
2. MD, SFAC
3. MD, NAFED
4. MD, NCCF

Copy to:

1. Chief Secretary, Government of Karnataka.
2. Joint Secretary (Cooperation), Department of Agriculture, Cooperation and Farmers Welfare

ಅನುಬಂಧ-4

2019-20ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಗೆ ಸಂಬಂಧಿಸಿದ ವಿವರ:

(ದಿನಾಂಕ:17-3-20202ರ ಅಂತ್ಯಕ್ಕೆ)

DISTRICT	NO OF CENTERS	NO OF FARMERS REGISTERED	QUANTITY PROCURED IN QUINTALS	NO OF FARMERS AVAILED THE SCHEME	NO OF FARMERS NOT YET AVAILED THE SCHEME
BAGALKOT	20	9539	77314	8563	976
BELGAUM	4	3418	28009.5	3051	367
BELLARY	6	586	3455.5	410	176
BIDAR	106	50177	300570.5	42906	7271
GULBARGA	121	91607	721855.146	76890	14717
Gulbarga1 (KTAML Centers)	39	29504	230298.75	24675	4829
KOPPAL	7	4230	34226.5	3853	377
RAICHUR	37	23538	202757.45	21783	1755
VIJAPURA(KAR)	113	86833	719005.15	75751	11082
YADGIR	31	17670	151310.05	16261	1409
Yadagiri (KTAML Centers)	3	874	7761	834	40
Total	**487**	**317976**	**2476563.546**	**274977**	**42999**

ಕರ್ನಾಟಕ ಸರ್ಕಾರ

ಸಂಖ್ಯೆ:ಆನಾಸ 107 ಡಿಆರ್‌ಎ 2020 (ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ನೆಲಮಹಡಿ
ಬೆಂಗಳೂರು ದಿನಾಂಕ: 19.03.2020

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ

08
5/3/20
20/3/20

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಾಮಸ್ವಾಮಿ ಎ.ಟಿ (ಅರಕಲಗೂಡು)ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2663ಗೆ ಉತ್ತರ ನೀಡುವ ಬಗ್ಗೆ.

******

ಮಾನ್ಯ ವಿಧಾನ ವಿಧಾನ ಸಭೆ ಸದಸ್ಯರಾದ ಶ್ರೀ ರಾಮಸ್ವಾಮಿ ಎ.ಟಿ (ಅರಕಲಗೂಡು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2663 ಕ್ಕೆ ಉತ್ತರವನ್ನು ಸಿದ್ಧಪಡಿಸಿ, ಅದರ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ
ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ.

ಪ್ರತಿ:

1. ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2663
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ರಾಮಸ್ವಾಮಿ ಎ.ಟಿ (ಅರಕಲಗೂಡು)
ಉತ್ತರಿಸಬೇಕಾದ ದಿನಾಂಕ	:	20.03.2020
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಪಡಿತರ ಚೀಟಿದಾರರಿಗೆ ಅಕ್ಕಿ, ಗೋಧಿ, ತೊಗರಿಬೇಳೆ, ತಾಳೆ ಎಣ್ಣೆ ಮತ್ತು ಉಪ್ಪು ಮುಂತಾದ ಅಗತ್ಯ ದವಸ-ಧಾನ್ಯಗಳನ್ನು ವಿತರಣೆ ಮಾಡುತ್ತಿದ್ದುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಸೆಪ್ಟೆಂಬರ್ 2016 ರಿಂದ ಜಾರಿಗೆ ಬರುವಂತೆ 1 ಲೀಟರ್ ಬಲವರ್ಧಿತ ತಾಳೆ ಎಣ್ಣೆಯನ್ನು ರೂ. 25/-ದರಲ್ಲಿ ವಿತರಿಸಲಾಗಿದ್ದು, ಅಕ್ಟೋಬರ್ 2016ರಿಂದ ಜಾರಿಗೆ ಬರುವಂತೆ 1 ಕೆ.ಜಿ ಬಲವರ್ಧಿತ ಉಪ್ಪನ್ನು ರೂ.2/-ರ ದರದಲ್ಲಿ ವಿತರಿಸಲಾಗಿರುತ್ತದೆ. 2017ರ ಮಾರ್ಚ್ ತಿಂಗಳವರೆಗೆ ಪ್ರತಿ ಕೆ.ಜಿಗೆ ರೂ. 15/-ರ ದರದಲ್ಲಿ ಸಕ್ಕರೆಯನ್ನು ಹಂಚಿಕೆ ಮಾಡಲಾಗಿರುತ್ತದೆ. ಸರ್ಕಾರ ಆದೇಶ ಸಂಖ್ಯೆ: ಆನಾಸ 150 ಡಿಆರ್‌ಎ 2017, ದಿನಾಂಕ: 15.05.2017ರನ್ವಯ ಈ ಎಲ್ಲಾ ಕಾರ್ಯಕ್ರಮವನ್ನು ಕೈಬಿಡಲಾಗಿದೆ. 2017ರ ಏಪ್ರಿಲ್ ತಿಂಗಳಿನಿಂದ 1 ಕೆ.ಜಿ ತೊಗರಿ ಬೇಳೆಯನ್ನು ರೂ.38/-ರ ದರದಲ್ಲಿ ಪಡಿತರ ಚೀಟಿದಾರರಿಗೆ ಹಂಚಿಕೆ ಮಾಡಲಾಗಿದ್ದು, ಸೆಪ್ಟೆಂಬರ್ 2019ರಿಂದ ಜಾರಿಗೆ ಬರುವಂತೆ ತೊಗರಿಬೇಳೆ ಹಂಚಿಕೆಯನ್ನು ಸ್ಥಗಿತಗೊಳಿಸಲಾಗಿದೆ. 2019-2020ನೇ ಸಾಲಿನಲ್ಲಿ ರಾಜ್ಯದಲ್ಲಿನ ಪಡಿತರ ಚೀಟಿದಾರರಿಗೆ ಸಾರ್ವಜನಿಕ ವಿತರಣಾ ಪದ್ಧತಿಯಡಿ ಅಕ್ಕಿಯನ್ನು ವಿತರಿಸಲಾಗುತ್ತಿದೆ. ಅಂತ್ಯೋದಯ ಪಡಿತರ ಚೀಟಿಗೆ 35.ಕೆ.ಜಿ ಹಾಗೂ ಆದ್ಯತಾ (ಬಿ.ಪಿ.ಎಲ್) ಪಡಿತರ ಚೀಟಿಯನ್ನು ಹೊಂದಿರುವ ಕುಟುಂಬದ ಪ್ರತಿ ಸದಸ್ಯರಿಗೆ 7 ಕೆ.ಜಿ ಅಕ್ಕಿಯನ್ನು ಉಚಿತವಾಗಿ ನೀಡಲಾಗುತ್ತಿದೆ. ಆದ್ಯತೇತರ ಪಡಿತರ ಚೀಟಿಯನ್ನು ಹೊಂದಿದ್ದು, ಪಡಿತರ ಧಾನ್ಯವನ್ನು ಪಡೆಯಲು ಸಹಮತಿಯನ್ನು ನೀಡಿರುವ ಏಕ ಸದಸ್ಯ ಪಡಿತರ ಕುಟುಂಬಕ್ಕೆ 5 ಕೆ.ಜಿ ಅಕ್ಕಿಯನ್ನು, ಇಬ್ಬರು ಹಾಗೂ ಅದಕ್ಕಿಂತ ಹೆಚ್ಚಿನ ಸದಸ್ಯರು ಹೊಂದಿರುವ ಪಡಿತರ ಕುಟುಂಬಕ್ಕೆ 10 ಕೆ.ಜಿ ಅಕ್ಕಿ ಯನ್ನು ರೂ. 15/-ರ ದರದಲ್ಲಿ ನೀಡಲಾಗುತ್ತದೆ.
ಆ	ಸದರಿ ಪಡಿತರ ಚೀಟಿದಾರರಿಗೆ ಪ್ರಸ್ತುತ ಅಕ್ಕಿಯನ್ನು ಮಾತ್ರ ವಿತರಿಸಲಾಗುತ್ತಿರುವುದರಿಂದ ಬಡ ಕುಟುಂಬದವರಿಗೆ ಹಾಗೂ ಕೂಲಿಕಾರರ	ಇಲ್ಲ

	ಜೀವನ ನಿರ್ವಹಣೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿಯನ್ನು ನೀಡುವುದು)	
ಇ)	ಹಾಗಿದ್ದಲ್ಲಿ, ಪಡಿತರ ಚೀಟಿದಾರರಿಗೆ ಈ ಹಿಂದೆ ವಿತರಣೆ ಮಾಡುವ ರೀತಿಯಲ್ಲಿಯೇ ಮುಂದಿನ ದಿನಗಳಲ್ಲಿ ಅಗತ್ಯ ಪದಾರ್ಥ-ಧಾನ್ಯಗಳನ್ನು ವಿತರಣೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು; ಹಾಗಿದ್ದಲ್ಲಿ, ವಿತರಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ಮಾಹಿತಿ ನೀಡುವುದು)	2020-21ನೇ ಸಾಲಿನಿಂದ ಆದ್ಯತಾ ಪಡಿತರ ಚೀಟಿಯನ್ನು ಹೊಂದಿರುವ ಕುಟುಂಬದ ಪ್ರತಿ ಸದಸ್ಯರಿಗೆ 5 ಕೆ.ಜಿ ಅಕ್ಕಿಯನ್ನು ಹಾಗೂ ಪ್ರತಿ ಕುಟುಂಬಕ್ಕೆ 2 ಕೆ.ಜಿ ಗೋಧಿಯನ್ನು ಪ್ರತಿ ತಿಂಗಳು ನೀಡಲು ಆಯವ್ಯಯದಲ್ಲಿ ಘೋಷಿಸಲಾಗಿದೆ.

ಆನಾಸ 107 ಡಿಆರ್‌ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

6

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 138 ಸಿಎಲ್‌ಎಸ್ 2020 (ಇ-ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:19.03.2020

Stand
20/3/2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-01

ಇವರಿಗೆ:

ಕಾರ್ಯದರ್ಶಿ, (ಪ್ರ)
ಕರ್ನಾಟಕ ವಿಧಾನ ಸಭೆ,
ಸಚಿವಾಲಯ, ವಿಧಾನ ಸೌಧ.

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀಮತಿ ರೂಪಕಲಾ ಎಂ (ಕೆ.ಜಿ.ಎಫ್) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2255 ಕ್ಕೆ ಉತ್ತರ ನೀಡುವ ಬಗ್ಗೆ.

***

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀಮತಿ ರೂಪಕಲಾ ಎಂ (ಕೆ.ಜಿ.ಎಫ್) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2255 ಕ್ಕೆ ಸಂಬಂಧಿಸಿದಂತೆ, ಉತ್ತರದ 350 ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

19/3/2020
(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀಮತಿ ರೂಪಕಲಾ ಎಂ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2255
ಉತ್ತರಿಸಬೇಕಾದ ದಿನಾಂಕ : 20.03.2020

ಕ್ರ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಸಹಕಾರಿ ಬ್ಯಾಂಕುಗಳ ಮುಖಾಂತರ ಮಹಿಳಾ ಸ್ವ-ಸಹಾಯ ಸಂಘಗಳಿಗೆ ನೀಡಿರುವ ಸಾಲದಲ್ಲಿ ಹೊರಬಾಕಿ ಮೊತ್ತವೆಷ್ಟು;	ರಾಜ್ಯದಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ನೀಡಿರುವ ಸಾಲದ ಪೈಕಿ ದಿ.31.1.2020 ರ ಅಂತ್ಯಕ್ಕೆ 72,180 ಮಹಿಳಾ ಸ್ವಸಹಾಯ ಗುಂಪುಗಳಿಂದ ರೂ. 1178.76 ಕೋಟಿ ಸಾಲದ ಹೊರಬಾಕಿ ಇರುತ್ತದೆ.
ಆ	ಸರ್ಕಾರವು ಆಯವ್ಯಯದಲ್ಲಿ ಘೋಷಿಸಿದಂತೆ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸಹಕಾರ ಬ್ಯಾಂಕುಗಳಿಂದ ಸಾಲ ವಿತರಣೆ ಮಾಡುತ್ತಿದ್ದು, ಸದರಿ ಬ್ಯಾಂಕುಗಳಿಗೆ ಸರ್ಕಾರದಿಂದ ಬಡ್ಡಿ ಪಾವತಿಸಲಾಗುತ್ತಿದೆಯೇ (ವಿವರ ನೀಡುವುದು)?	ಹೌದು, ಸರ್ಕಾರವು ಆಯವ್ಯಯದಲ್ಲಿ ಘೋಷಿಸಿದಂತೆ ಸ್ವಸಹಾಯ ಗುಂಪುಗಳಿಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ವಿತರಿಸಿದ ಸಾಲಗಳಿಗೆ ರಾಜ್ಯ ಸರ್ಕಾರದ ಬಡ್ಡಿ ಸಹಾಯಧನ ವಂತಿಕೆಯನ್ನು ಸರ್ಕಾರದಿಂದ ಪಾವತಿಸಲಾಗುತ್ತಿದೆ. 2016-17 ನೇ ಸಾಲಿನಿಂದ ಕೇಂದ್ರ ಸರ್ಕಾರದ ರಾಷ್ಟ್ರೀಯ ರೂರಲ್ ಲೈವ್‌ಲಿಹುಡ್ ಮತ್ತು ರಾಷ್ಟ್ರೀಯ ಅರ್ಬನ್ ಲೈವ್‌ಲಿಹುಡ್ ಯೋಜನೆ ಅಳವಡಿಸಿಕೊಂಡು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಮೂಲಕ ಸ್ವಸಹಾಯ ಗುಂಪುಗಳಿಗೆ ನಿವ್ವಳ ಶೇ. 4 ರ ಬಡ್ಡಿ ದರದ ಅನ್ವಯವಾಗುವಂತೆ ಸಾಲ ವಿತರಿಸಲಾಗುತ್ತಿತ್ತು. 2017-18 ನೇ ಸಾಲಿನ ಆಯವ್ಯಯದಲ್ಲಿ "ರಾಜ್ಯದ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಹಕಾರ ಸಂಘಗಳ ಮೂಲಕ ಶೇ.4 ರ ಬಡ್ಡಿ ದರದಲ್ಲಿ ವಿತರಿಸಲಾಗುತ್ತಿರುವ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸಲಾಗುವುದು." ಎಂದು ಘೋಷಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ರೂರಲ್ ಲೈವ್‌ಲಿಹುಡ್ ಮತ್ತು ರಾಷ್ಟ್ರೀಯ ಅರ್ಬನ್ ಲೈವ್‌ಲಿಹುಡ್ ಯೋಜನೆಯನ್ನು 2017-18 ನೇ ಸಾಲಿನಲ್ಲಿಯೂ ಸಹ ರಾಜ್ಯ ಸರ್ಕಾರದ ಯೋಜನೆಗೆ ಅಳವಡಿಸಿಕೊಳ್ಳಬೇಕಾಗಿದ್ದರಿಂದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಕೇಂದ್ರ ಸರ್ಕಾರದ ಯೋಜನೆಯ ಷರತ್ತುಗಳನ್ವಯ ಮಹಿಳಾ ಸ್ವಸಹಾಯ ಗುಂಪುಗಳಿಗೆ ರೂ.5.00 ಲಕ್ಷಗಳ ವರೆಗಿನ ಸಾಲವನ್ನು ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ವಿತರಿಸಲು ಆದೇಶಿಸಲಾಗಿದೆ. ಮುಂದುವರೆದು ಕೇಂದ್ರ ಸರ್ಕಾರ ವಿಧಿಸಿದ ಮಾನದಂಡಗಳನ್ವಯ ಶೇ.12 ರ ಬಡ್ಡಿ ದರದಲ್ಲಿ ಸಾಲ ವಿತರಿಸಲು ಮತ್ತು ಕೇಂದ್ರ ಸರ್ಕಾರದಿಂದ ಲಭ್ಯವಾಗುವ ಬಡ್ಡಿ ಸಹಾಯಧವನ್ನು ಕೇಂದ್ರ ಸರ್ಕಾರದಿಂದ ಕ್ಲೇಮು ಮಾಡಿ ಉಳಿದ ಬಡ್ಡಿ ಸಹಾಯಧನವನ್ನು ರಾಜ್ಯ ಸರ್ಕಾರದಿಂದ ಕ್ಲೇಂ ಮಾಡಲು ಸೂಚಿಸಲಾಗಿದೆ. ಮೇಲಿನ ಸರ್ಕಾರದ ಆದೇಶದನ್ವಯ ರಾಜ್ಯ ಸರ್ಕಾರದ ಬಡ್ಡಿ ಸಹಾಯಧನವನ್ನು ವಂತಿಕೆಯನ್ನು ನೀಡುವ ಸಲುವಾಗಿ 2018-19 ನೇ ಸಾಲಿನಲ್ಲಿ ರೂ.60.00 ಕೋಟಿಗಳ ಅನುದಾನವನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ನೀಡಲಾಗಿದೆ. 2019-20 ನೇ ಸಾಲಿನಲ್ಲಿ ರೂ.85.30 ಕೋಟಿಗಳ ಆಯವ್ಯಯ ಅವಕಾಶ ಕಲ್ಪಿಸಿ ಇದುವರೆಗೆ ರೂ.42.56 ಕೋಟಿಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗಿದೆ. ಸದ್ಯಕ್ಕೆ ಪಾವತಿಸಲು ಯಾವುದೇ ಬಿಲ್ಲು ಬಾಕಿ ಇರುವುದಿಲ್ಲ. ಕೇಂದ್ರ ಸರ್ಕಾರದ ಪಾಲಿನ ಬಡ್ಡಿ ಸಹಾಯಧನವನ್ನು ರಾಜ್ಯ ಸರ್ಕಾರವೇ ಪಾವತಿಸುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ:ಸಿಒ 138 ಸಿಎಲ್‌ಎಸ್ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

1+1 Stand 20/3/2020

File No. CI/63/IAP/2020-ID-C&I SEC

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 63 ಐಎಪಿ(ಇ) 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 19.03.2020.

7

Stand 20/3/20

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ (ಪ್ರ),
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಗೌರಿಶಂಕರ್ ಡಿ.ಸಿ. (ತುಮಕೂರು ಗ್ರಾಮಾಂತರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2256ಕ್ಕೆ ಉತ್ತರಿಸುವ ಕುರಿತು.

---*---

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಗೌರಿಶಂಕರ್ ಡಿ.ಸಿ. (ತುಮಕೂರು ಗ್ರಾಮಾಂತರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2256ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(signature) 19/3/2020
(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

19/3/2020

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**2256**
2.	ಸದಸ್ಯರ ಹೆಸರು	:	ಶ್ರೀ ಗೌರಿಶಂಕರ್ ಡಿ.ಸಿ (ತುಮಕೂರು ಗ್ರಾಮಾಂತರ)
3.	ಉತ್ತರಿಸುವ ದಿನಾಂಕ	:	**20.03.2020**
4.	ಉತ್ತರಿಸುವ ಸಚಿವರು	:	ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಯಾವ ಯಾವ ಪ್ರದೇಶದಲ್ಲಿ ಎಷ್ಟು ವಿಸ್ತೀರ್ಣ ಜಾಗದಲ್ಲಿ ಮತ್ತು ಎಷ್ಟು ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಿದೆ; ಯಾವ ಯಾವ ಷರತ್ತುಗಳಿಗೆ ಒಳಪಟ್ಟು ಮತ್ತು ಎಷ್ಟು ವಿಸ್ತೀರ್ಣ ಜಾಗವನ್ನು ಹಂಚಿಕೆ ಮಾಡಿದೆ; ಹಂಚಿಕೆಯಾಗದೇ ಉಳಿದಿರುವ ವಿಸ್ತೀರ್ಣ ಜಾಗವೆಷ್ಟು; ಯಾವ ಕಾರಣಕ್ಕಾಗಿ ಉಳಿಕೆ ವಿಸ್ತೀರ್ಣ ಜಾಗವನ್ನು ಹಂಚಿಕೆ ಮಾಡಿಲ್ಲ (ಹೆಸರುವಾರು, ವಿಸ್ತೀರ್ಣವಾರು, ಸಂಖ್ಯಾವಾರು ಸಂಪೂರ್ಣ ವಿವರ ನೀಡುವುದು);	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಿರೇಹಳ್ಳಿ ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ 160-86 ಎಕರೆ ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಿದ್ದು, ಈ ಪೈಕಿ ರಸ್ತೆ ಇತ್ಯಾದಿ ಮೂಲಭೂತ ಸೌಕರ್ಯಕ್ಕೆ 23-86 ಎಕರೆ ವಿಸ್ತೀರ್ಣವನ್ನು ಹೊರತುಪಡಿಸಿ ಹಂಚಿಕೆಗೆ ಲಭ್ಯವಿದ್ದ 137-34 ಎಕರೆ ವಿಸ್ತೀರ್ಣವನ್ನು ವಿವಿಧ ಯೋಜನೆಗಳಿಗಾಗಿ 94 ಹಂಚಿಕೆದಾರರಿಗೆ ಮಂಜೂರು ಮಾಡಲಾಗಿದೆ. ಹಂಚಿಕೆದಾರರುಗಳು ಗುತ್ತಿಗೆ ಕರಾರಿನಲ್ಲಿರುವ ಷರತ್ತುಗಳಿಗೆ ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಹಂಚಿಕೆದಾರರ ಹೆಸರು, ನಿವೇಶನ ಸಂಖ್ಯೆ ಹಾಗೂ ವಿಸ್ತೀರ್ಣದ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. ವಸಂತನರಸಾಪುರ 1ನೇ ಹಂತಕ್ಕಾಗಿ ಕೆಂಪನದೊಡ್ಡೇರಿ, ನಾಗೇನಹಳ್ಳಿ, ತಿಮ್ಮರಾಜನಹಳ್ಳಿ ಮತ್ತು ಗಿರಿಯನಹಳ್ಳಿ ಗ್ರಾಮದ ಹಲವಾರು ಸರ್ವೆ ನಂಬರ್‌ಗಳಲ್ಲಿ ಒಟ್ಟು 782-22 ಎಕರೆ ವಿಸ್ತೀರ್ಣವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತಿಮ್ಮರಾಜನಹಳ್ಳಿ ಮತ್ತು ಗಿರಿಯನಹಳ್ಳಿ ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿ ರಚನೆ ಮಾಡಿರುವ ನಿವೇಶನ ಸಂಖ್ಯೆ, ವಿಸ್ತೀರ್ಣ ಹಾಗೂ ಹಂಚಿಕೆದಾರರ ಹೆಸರುಗಳ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ. ಪ್ರಸ್ತುತ ಹಿರೇಹಳ್ಳಿ ಕೈಗಾರಿಕಾ ಪ್ರದೇಶ ಮತ್ತು ವಸಂತನರಸಾಪುರ 1ನೇ ಹಂತದಲ್ಲಿ ಯಾವುದೇ ನಿವೇಶನಗಳು ಹಂಚಿಕೆಗೆ ಲಭ್ಯವಿರುವುದಿಲ್ಲ. ಹಿರೇಹಳ್ಳಿ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗಾಗಿ ರೂ.4.11 ಕೋಟಿ ಮತ್ತು ವಸಂತನರಸಾಪುರ 1ನೇ ಹಂತದ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗಾಗಿ ರೂ.165.59 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ವಿವರಗಳನ್ನು ಅನುಭಂದ-3ರಲ್ಲಿ ಒದಗಿಸಿದೆ.

ಆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸ್ವಾಧೀನಪಡಿಸಿ ಕೊಂಡಿರುವ ಜಮೀನಿನ ರೈತರಿಗೆ ಪರಿಹಾರ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; ಎಷ್ಟು ರೈತರಿಗೆ ಪರಿಹಾರ ನೀಡಿರುವುದಿಲ್ಲ; ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ಪಾವತಿಸಿರುವ ಮತ್ತು ಪಾವತಿಸಲು ಬಾಕಿ ಇರುವ ಜಮೀನುಗಳ ವಿವರ ಈ ಕೆಳಕಂಡಂತಿದೆ:-

ಕ್ರ ಸಂ	ಕೈಗಾರಿಕಾ ಪ್ರದೇಶದ ಹೆಸರು	ವಿಸ್ತೀರ್ಣ	ಪರಿಹಾರ ಪಾವತಿಸಿ ರುವ ವಿಸ್ತೀರ್ಣ	ಪರಿಹಾರ ಪಾವತಿ-ಸಲು ಬಾಕಿ ಇರುವ ವಿಸ್ತೀರ್ಣ	ಪರಿಹಾರ ಪಾವತಿಸ ಬೇಕಾದ ರೈತರ ಸಂಖ್ಯೆ	ಷರಾ
1	ವಸಂತ ನರಸಾಪುರ ಕೈಗಾರಿಕಾ ಪ್ರದೇಶ 1ನೇ ಹಂತ (ತಿಮ್ಮರಾಜನ ಹಳ್ಳಿ ಗಿರಿಯನಹಳ್ಳಿ)	144-10 24-02 ಖರಾಬ್ 120-08 ಖುಷ್ಕಿ	116-31	–	–	ಉಳಿಕೆ 3-17 ಎಕರೆ ಸರ್ಕಾರಿ ಜಮೀನು ನಮೂನೆ 50, 53 ರಡಿ ಮಂಜೂರಾಗಿ ಸಾಗುವಳಿ ಚೀಟಿ ನೀಡಿದ್ದು, ಪರಿಹಾರ ಪಾವತಿಸಲು ಕ್ರಮವಹಿಸಲಾಗಿದೆ
2	ವಸಂತ ನರಸಾಪುರ ಕೈಗಾರಿಕಾ ಪ್ರದೇಶ 4ನೇ ಹಂತ (ಸೋರೆ ಕುಂಟೆ ಗೌಡನಹಳ್ಳಿ ಪಿ.ಗೊಲ್ಲ ಹಳ್ಳಿ ಮುರುಡು ಕುಂಟೆ ಗಿರಿಯನಹಳ್ಳಿ ಅಂಗನಹಳ್ಳಿ)	1722-30 475-12 ಖರಾಬ್ 1247-18 ಖುಷ್ಕಿ	750-17½	460-30¾	165	1722-30 ಎಕರೆ ಜಮೀನಿನ ಪೈಕಿ 475-12 ಎಕರೆ ಖರಾಬ್ ಜಮೀನಿನಲ್ಲಿ 452-11 ಎಕರೆ ಜಮೀನು ಸರ್ಕಾರಿ ಜಮೀನಾಗಿದ್ದು, ಮಂಡಳಿಗೆ ಹಸ್ತಾಂತರವಾಗಿದೆ. ಉಳಿದ 23-01 ಎಕರೆ ಹಿಡುವಳಿ ಖರಾಬ್ ಆಗಿರುತ್ತದೆ. ಪರಿಹಾರ ಪಾವತಿಸಲು ಬಾಕಿ ಇರುವ 460-30¾ ಎಕರೆ ಜಮೀನಿನ ಪೈಕಿ 421-35¾ ಎಕರೆ ಜಮೀನಿಗೆ ಭೂಮಾಲೀಕರು ದಾಖಲಾತಿಗಳನ್ನು ಸಲ್ಲಿಸದೇ ಇರುವ ಹಾಗೂ ಸಿವಿಲ್ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲು ಮಾಡಿರುವುದರಿಂದ ಸಾಮಾನ್ಯ ಐತೀರ್ಪು ರಚಿಸಿದ್ದು, ಐತೀರ್ಪು ಮೊತ್ತವನ್ನು ನ್ಯಾಯಾಲಯಕ್ಕೆ ಠೇವಣಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸಾಮಾನ್ಯ ಐತೀರ್ಪು ವಜಾಗೊಳಿಸಿ ಕೊಂಡು ಬಂದ ಭೂಮಾಲೀಕರಿಗೆ ಒಪ್ಪಂದದಡಿ ಪರಿಹಾರ ಪಾವತಿಸಲಾಗುತ್ತಿದೆ.

								38-35 ಎಕರೆ ಜಮೀನಿಗೆ ಭೂಸ್ವಾಧೀನವನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. 36-09 ಎಕರೆ ವಿಸ್ತೀರ್ಣವು ಜೆ.ಎಂ.ಸಿ.ಯಂತೆ ಕಡಿಮೆ ಇರುತ್ತದೆ.
		3	ವಸಂತನರ ಸಾಮರ ಕೈಗಾರಿಕಾ ಪ್ರದೇಶ 5ನೇ ಹಂತ (ಮಲ್ಲೇನ ಹಳ್ಳಿ ನೆಲಹಾಳು ಚಿಕ್ಕಶೀಬಿ)	1154-03	-	-	-	ಈ ಜಮೀನುಗಳನ್ನು ಸ್ವಾಧೀನಪಡಿಸಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಜೆಎಂಸಿ ಕಾರ್ಯ ಪ್ರಗತಿಯಲ್ಲಿದೆ.
		4	ವಸಂತನರ ಸಾಮರ ಕೈಗಾರಿಕಾ ಪ್ರದೇಶ 6ನೇ ಹಂತ (ಸೋಮ ಸಾಗರ ನೆಲಹಾಳು ಚಿಕ್ಕಶೀಬಿ)	631-14 1/2	-	-	-	

ಸಂಖ್ಯೆ: ಸಿಐ 63 ಐಎಪಿ(ಇ) 2020

(ಜಗದೀಶ್ ಶೆಟ್ಟರ್)
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ,
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ANNEXURE-1 LAQ TO 2256

ಅನುಬಂಧ-I (P)

Hirehalli I.A

Sl No.	Name of the Industry	Plot No	Extent (in acres)
1	2	5	4
1	M/S. CHAMUNDI MAPEDS PVT LTD	1 & 2	10.71
2	POLYMERS BAGS & TARPAULINS	3	1.60
3	POLYMERS BAGS & TARPAULINS	3-A	3.46
4	INDUSTRIALISTS ASSOCIATION	3-A-1	0.17
5	COMPOSITE TECHNOLOGIES (P) LTD	4	3.56
6	IBIS HEALTH AIDS LTD	5	5.47
7	KIRLOSKAR ELECTRIC COMPANY LTD	6-AI & 6-B1	3.74
8	VENKATESHWARA INDL. ENTERPRISES	6-A2	0.93
9	PREMDEEP INDUSTRIES	6-B	0.53
10	M/s. CIPSA	7 & 8 Part	10.26
11	KSSIDC	8	6.16
12	ANSH INDUSTRIES	9-A	1.87
13	SRI SWARNAMBA GRANITE INDUSTRIES	9-B	0.98
14	UMA GRANITE INDUSTRIES	9-C	0.47
15	SWARNAMBA GRANITE INDUSTRIES	9-D & 9-E	0.80
16	AMBIKA INDUSTRIES	9-F	0.49
17	DELIGHT TIME INDUSTRIAL	9-G	0.63
18	ANJANA ENTERPRISES	9-A1-P1	0.82
19	TUMKUR INDUSTRIAL OIL & LUBRICANTS	9-A1-P2 & 10	2.24
20	BANGALORE ELECTROPLATING SYSTEMS	9-B1	0.98
21	SUPER STONE INDUSTRIES	9-B2 PART -1	1.00
22	NUCO CARBONS	9-B2 PART-2	1.11

Sl No.	Name of the Industry	Plot No	Extent (in acres)
1	2	5	4
23	STEEL GLOW ENTERPRISES	11-A	0.50
24	RESIDENCY MARBLES & EXPORTS (P) LTD	11-B	0.45
25	VRKP RE-ROLLING MILL PVT. LTD.	12	0.75
26	VRKP RE-ROLLING MILL PVT. LTD	13	1.01
27	MAINI GRANITES LIMITED	,15,16,17, 22C, 23&2	5.49
28	PRECISION SHEET METAL WORKS (P) LTD	18-A	0.50
29	DARSHAN GRANITE CUTTING & POLISHING	18-B	0.51
30	DIVYA CASES	19-A	0.74
31	SHUBHAM GRANITES	20	1.01
32	ABBEGG GRANITES & SERVICES (P) LTD	21	1.00
33	TADIMETY AROMATICS PVT. LTD.	25 - A	1.31
34	M/S. CLASSIC TOOLS	25 B1	0.94
35	PADMAVATHI PLASTIC FACTORY	25-B2	0.44
36	SHREYAS GRANITES	26-A	1.00
37	JAYALAKSHMI STONE INDUSTRIES	26-B	1.00
38	DEVI FABRICATION	26-B-PART	0.50
39	SHREE LAKSHMI RANGANATHSWAMY ENTERPRISES	26 C & 26 D	1.92
40	TAMURA ELCOMPONICCS TECHNOLOGIES PTV. LTD	29-P1	1.09
41	S.S.B. GRANITES	29-P2	0.67
42	JYOTHI INDUSTRIES	29-P3	0.39
43	LAKSHMI PROFILE	29-P4 & 29-P5	1.01
44	SREE SAI ENTERPRISES	29-P6	0.50
45	K.E.B.	29 (P), 30, 31	3.67
46	BALAJI ENGINEERING WORKS	32	0.75

(3)

Sl No.	Name of the Industry	Plot No	Extent (in acres)
1	2	5	4
47	SRI BALAJI ENTERPRISES	33	0.81
48	P.M.H. & SONS INDUSTRIES	34	1.00
49	SWAMY CONCRETE BLOCKS	35	1.95
50	TTP TECHNOLOGIES PVT LTD	36	4.18
51	KAR MOBILES LIMITED	36-B & 37	9.90
52	VEE YES ARR METALS (P) LTD	38-A	0.83
53	S.R. PRINT PACKS	38-B	0.51
54	ALFA FINE CHEMICALS	38-C	0.50
55	GANGA STEEL PRODUCTS	38-D	0.50
56	SUNSHINE ENTRUSIONS (INDIA) PVT. LTD.	38-E	0.49
57	SUNSHINE ENTRUSIONS (INDIA) PVT. LTD.	38-F	0.50
58	S.L.N. INDUSTRIES	38-G	0.63
59	JAY KAY INDUSTRIES	38-H	0.56
60	NICHIBO TIME INDUSTRIES	38-I	0.32
61	ADARSHA ENTERPRISES	38-J	0.28
62	R & S ASSOCIATES	39-A	1.00
63	ANAND WIRE & WIRES PRODUCTS	39-A-P & 40	1.11
64	A.H. GRANITES	39-B	1.09
65	SUPER TREAD SERVICES	39-C	1.01
66	KARNATAKA WATCH CASE INDUSTRIES	39-C1	1.12
67	PEE YES WATCHES PVT. LTD	39-C2	1.05
68	PRINCE COTTAGE	C3 & 39C3 PA	0.65
69	LAN AGRO PRODUCTS	41	1.00
70	UDS FIO TECH	41-P	0.50

(4)

Sl No.	Name of the Industry	Plot No	Extent (in acres)
1	2	5	4
71	MEGADIME INC.	42	1.00
72	S.R.S. ALLOYS (P) LTD	43	0.98
73	JAYA INDUSTRIES & FOUNDRY	44	1.00
74	DEVIRENEWABLE FUELS PVT. LTD.,	45-A	1.99
75	SAP ENTERPRISES	45-P & 45-P1	0.96
76	GEETHA GRANITES	46	1.00
77	TILAK RAJ & SONS	47	1.46
78	ASHAPALLAVI CHEMOX	47 PART 1	0.38
79	TECHNOMAX SOLAR DEVICES PVT LTD	47 PART 2	1.00
80	SWAMY CONCRETE PRODUCTS PVT LTD.	47 PART 3	0.05
81	Telecom District Engineer	48P & 49P	1.56
82	JITEN PLYWOOD (P) LTD.	50-A	2.41
83	CHAMUNDI DIE CAST PVT. LTD.	50-B & 50-C	0.99
84	CHAMUNDI DIE CAST PVT. LTD.	50-D	0.48
85	ROHIT & THRISUL FIBRE INDUSTRIES	50-E	0.50
86	KUNCHAM INDUSTRIES & PULVERISES	50-F	0.81
87	ADUNIK ASSOCIATES	50-F1	0.92
88	BIO TECH PRODUCTS	50-P- 51-A	0.46
89	BRINDAVAN ELECTRICALS	50-51-B	0.48
90	VIGNESWARA GRANITES & TILES	50-51 -C	0.50
91	APEX INDUSTRIES	51-D	0.51
92	INDO FORM CHEMICALS	50-51-E	0.50
93	PUDO INDUSTRIES	51-F PART	0.40
94	MATHRU ROTO PACKS	51-F	0.46

Sl No.	Name of the Industry	Plot No	Extent (in acre)
THIMMARAJANAHALLI			
1	M/s Vectus Industries Ltd	98 & 99-A(ಭಾಗಶಃ)	3.00
2	M/s. Mamta Enterprises	99-B	1.00
3	M/s. Sri Sai Engineering	100-A	0.50
4	M/s. R.K. Associates	100-B	0.50
5		101-A	
6		101-B	
7	M/s. Dhruva Infotech M/s. Adithya Industries	102-A & 174-A	1.00
8	M/s. Manupriya Idnustries	102-B	0.50
9	M/s. Energy Resources	103	1.00
10	M/s. SGF Fab Industries	104	1.00
11	M/s. Delta Products	105	0.50
12	M/s. Sri Rama Engineering	106-A	0.50
13	M/s. Divyashree Tool Tech	106-B	0.50
14	M/s. Metal Shape	106-C	0.57
15	M/s G.S.S. Engineering Works,	107	1.00
16	M/s. Tetra Space Fabricators	108-A	0.50
17	M/s. A.S.P. Engineers & Fabricat	108-B	0.50
18	M/s S.P. Tool Tech	117(ಭಾಗಶಃ)	1.00
19	M/s. M.D. Craft Industries	118	1.47
20	M/s. Gayathri Structural & Roofin	119	1.00
21	M/s K. Bond Polymers Pvt, Ltd.,	120	1.00
22	M/s. V.S.S. Industries pvt. Ltd.,	121	1.00
23	M/s. Acuten Global	122	1.00
24	M/s. Brite Stone Abrasives	123	1.00
25	M/s Ramisol	124	1.00
26	M/s Sri Datta Venkatramana Industries	125-A	0.25
27		125-A1	
28	M/s. Shanoor Industries	125-B	0.25
29	M/s. S.R. Metal Marts	126-A	0.50
30	M/s. Vijay Electric Co.	126-B	0.50
31	M/s. Shiva Industries	126-C	0.50
32	M/s. Sri Sai Sagar Industries	126-D	0.50
33		128	
34	M/s. Adarsha Engineers	129-A	0.50
35	M/s. G. R. Industries	129-B	0.50
36	M/s. Maruthi Industries	130	1.00
37	M/s. R S Granites	131	1.00

38	M/s. Yesdior Tools & Components	132	1.00
39	M/s. S. S. Enterprises	133	1.00
40	M/s. Mano Packers	134 (Corner)	1.00
41	M/s. Ramanjaneya Engineering V	135-A (Corner)	0.25
42	M/s. Gopala Krishna Swamy Gra	135-B	0.25
~~43~~	~~M/s. C.B.S. Enterprises~~	~~135-C~~	~~0.50~~
44	M/s. Vinayaka Enterprises	136 & 137-A	1.50
45	M/s. Plasmoteck	137-B & 138	1.50
46	M/s. D C Hoist and Instruments	139-A	0.50
47	M/s. Chandra Engineering Industries	139-B	0.50
48	M/s. Sri Industries	139-C	0.50
49	M/s. K. R. Auto Spares Private Limited	148	1.00
50	M/s. Sri Balaji Granites	149	1.30
51	M/s. Shree Venkateshwara Enterprises	150	1.00
52	M/s. Maruthi Garments	151	1.00
53	M/s. DJM Power Controls	152	1.00
54	M/s. Shanti Electrical	153 (Corner)	1.00
55	M/s. Swatch E-Waste Recycling	154	1.00
56	M/s. Glory Paper Products	155	1.00
57		156	
58	M/s. Lakshmi Venkateshwara Enterprises	160	1.00
59		161-A	
60	M/s. Century Drums & Barrels Industries	161-B	0.50
61	M/s. Century Drums & Barrels Industries	161-C	1.00
62	M/s. Oneness Infratech	161-D	2.00
63	M/s. Manvitha Logistics	161-D1	1.00
64	M/s.SDLR Exports Private Limited	161-E (Corner)	2.00
65	M/s. Lakshmi Venkateshwara Engineering Works	161-F	0.38
66		CA-2N	
67		CA-2A(ಭಾಗಶಃ)	
68		CA-1(ಭಾಗಶಃ)	
69		161-G	
70	M/s. Green Apple Solutions	161-H (Corner)	2.00
71	M/s Logic Logistics	162-A (Corner)	2.00
72	M/s. Coastal Coatings	165	4.00

(7)

GIRIYANAHALLI			
1	M/s. South India Wire Products Pvt. Ltd.,	199-C2(ಭಾಗಶಃ)	3.00
2	M/s. Jai Bhavishyath Transport Pvt. Ltd.	201-B (Com-2)(ಭಾಗಶಃ)	1.00
3	M/s. G. K. Logistics	201-C (Com-2) Corner	2.00
4	M/s. Akshaya Enterprises	202-A (Corner)	2.00
5	M/s. Vinayaka Food Processing	202-B	0.50
6	M/s. Sri Ranga Industries	202-C (Corner)	1.00

ANNEXURE-3 TO LAQ NO. 2256

DEVELOPMENTAL EXPENDITURE SINCE INCEPTION

(Amt. in Rs.)

Industrial Area	Road works	Water supply	Bldg. Works	Elec. Works	S&D	Mainte-nance	Stock/ Mate.	Up-gradation	Others	Total
Hirehally	8071131.00	4948235.00	1463410.00	7759207.00	31573.00	1347897.05	105338.00	17379686.00	0.00	41106477.05
Vasanthanarasa-pura 1st Phase	1406736185.00	18906966.00	493321.00	187507275.00	32466614.00	0.00	0.00	478782.00	3968731.00	1655941486.00

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 28 ಎಲ್‌ಸಿಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 19.03.2020

08
5/02
20/3/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆ ಸದಸ್ಯರಾದ ಶ್ರೀ ತನ್ವೀರ್ ಸೇಠ್ (ನರಸಿಂಹರಾಜು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2636ಕ್ಕೆ ಉತ್ತರಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ತನ್ವೀರ್ ಸೇಠ್ (ನರಸಿಂಹರಾಜು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2636ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್. ದಿವಾಕರ್)
ಶಾಖಾಧಿಕಾರಿ (ಮಂಡಳಿ ಶಾಖೆ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2636
ಸದಸ್ಯರ ಹೆಸರು : ಶ್ರೀ ತನ್ವೀರ್ ಸೇಠ್(ನರಸಿಂಹರಾಜ)
ಉತ್ತರಿಸುವ ದಿನಾಂಕ : 20/03/2020
ಉತ್ತರಿಸಬೇಕಾದವರು : ನಗರಾಭಿವೃದ್ಧಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾಗಿರುವ ಬಡಾವಣೆಗಳೆಷ್ಟು ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆದು ರಚಿಸಲಾಗಿರುವ ಖಾಸಗಿ ಬಡಾವಣೆಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು);	ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಹಿಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರಚನೆಗೊಂಡ ನಂತರ ಇಂದಿನವರೆಗೆ ರಚಿಸಿರುವ ಒಟ್ಟು ಬಡಾವಣೆಗಳು – **62** (ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ) ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆದು ರಚಿಸಲಾಗಿರುವ ಒಟ್ಟು ಖಾಸಗಿ ಬಡಾವಣೆಗಳು – **100** (ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ)
ಆ)	ಈ ಪೈಕಿ ಕಾಮಗಾರಿ ಪೂರ್ಣಗೊಂಡು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿರುವ ಹಾಗೂ ಹಸ್ತಾಂತರಗೊಳ್ಳದಿರುವ ಬಡಾವಣೆಗಳೆಷ್ಟು (ಸಂಪೂರ್ಣ ಮಾಹಿತಿ ನೀಡುವುದು);	**ಕಾಮಗಾರಿ ಪೂರ್ಣಗೊಂಡು ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರವಾಗಿರುವ ಬಡಾವಣೆಗಳ ವಿವರ** 1. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ರಚಿಸಿ ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಿರುವ ಒಟ್ಟು ಬಡಾವಣೆಗಳು – 62 **(ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ).** 2. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಗಳನ್ನು ಪೂರ್ಣಗೊಳಿಸಿ ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಿರುವ ಒಟ್ಟು ಖಾಸಗಿ ಬಡಾವಣೆಗಳು –79 (ವಿವರಗಳನ್ನು ಅನುಬಂಧ-4 ರಲ್ಲಿ ನೀಡಲಾಗಿದೆ)

		ಕಾಮಗಾರಿ ಪೂರ್ಣಗೊಂಡು ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರಗೊಳ್ಳದಿರುವ ಬಡಾವಣೆಗಳ ವಿವರ 1. ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ರಚಿಸಿ ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡದೇ ಇರುವ ಬಡಾವಣೆಗಳು – **ಯಾವುದು ಇರುವುದಿಲ್ಲ.** 2. ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಧಿಕಾರದಿಂದ ಅನುಮೋದನೆ ಪಡೆದು ರಚಿಸಿ ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡದೇ ಇರುವ ಒಟ್ಟು ಖಾಸಗಿ ಬಡಾವಣೆಗಳು – **21 (ವಿವರಗಳನ್ನು ಅನುಬಂಧ-5 ರಲ್ಲಿ ನೀಡಲಾಗಿದೆ).**
ಇ)	ಹಸ್ತಾಂತರಗೊಂಡಿರುವ ಬಡಾವಣೆಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ(ವಿವರ ನೀಡುವುದು)?	ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಾಲಿಕೆಗೆ ಹಸ್ತಾಂತರವಾಗಿರುವ ಬಡಾವಣೆಗಳಿಗೆ ಹಾಗೂ ಪ್ರಾಧಿಕಾರದಿಂದ ಅನುಮೋದನೆಗೊಂಡು ಹಸ್ತಾಂತರಿಸಿರುವ ಖಾಸಗಿ ಬಡಾವಣೆಗಳಿಗೆ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಮೈಸೂರು ಮಹಾನಗರ ಪಾಲಿಕೆಯಿಂದ ಒದಗಿಸಲಾಗುತ್ತಿದೆ. • ಕುಡಿಯುವ ನೀರು ಸರಬರಾಜು • ಒಳಚರಂಡಿ ಅಭಿವೃದ್ಧಿ ಮತ್ತು ನಿರ್ವಹಣೆ • ರಸ್ತೆ ಅಭಿವೃದ್ಧಿ ಮತ್ತು ನಿರ್ವಹಣೆ • ಮಳೆ ನೀರು ಚರಂಡಿ ಅಭಿವೃದ್ಧಿ ಮತ್ತು ನಿರ್ವಹಣೆ • ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ • ಸ್ಮಶಾನಗಳ ಅಭಿವೃದ್ಧಿ ಮತ್ತು ನಿರ್ವಹಣೆ. • ಬಡಾವಣೆಗಳಿಗೆ ಬೆಳಕಿನ ವ್ಯವಸ್ಥೆ ಕಲ್ಪಿಸುವುದು ಮತ್ತು ನಿರ್ವಹಿಸುವುದು. • ಸಾರ್ವಜನಿಕ ಶೌಚಾಲಯ ನಿರ್ಮಾಣ ಮತ್ತು ನಿರ್ವಹಣೆ.

ಸಂಖ್ಯೆ: ನಅಇ 28 ಎಲ್ಎಕ್ಯೂ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ತನ್ವೀರ್ ಸೇಠ್ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2636

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾಗಿರುವ ಬಡಾವಣೆಗಳ ವಿವರ

ಅನುಬಂಧ-1

ಕ್ರ. ಸಂ.	ಬಡಾವಣೆಯ ಹೆಸರು	ಷರಾ
1	ಶ್ರೀರಾಂಪುರ	
2	ಶ್ರೀರಾಂಪುರ 1ನೇ ಹಂತ	
3	ಶ್ರೀರಾಂಪುರ 2ನೇ ಹಂತ	
4	ಶ್ರೀರಾಂಪುರ 3ನೇ ಹಂತ	
5	ನಾಚನಹಳ್ಳಿ, ಕುಪ್ಪಲೂರು 3ನೇ ಹಂತ	
6	ವಿದ್ಯಾರಣ್ಯಪುರಂ	
7	ಜೆ.ಪಿ.ನಗರ	
8	ದಟ್ಟಗಳ್ಳಿ 3ನೇ ಹಂತ ಬಡಾವಣೆ	
9	ಬೋಗಾದಿ 2ನೇ ಹಂತ (ಉತ್ತರ) ಬಡಾವಣೆ	
10	ಬೋಗಾದಿ 2ನೇ ಹಂತ (ದಕ್ಷಿಣ) ಬಡಾವಣೆ	
11	ಬೋಗಾದಿ ಆಂತ್ರೋಪಾಲಜಿಕಲ್ ಸರ್ವೆ ಆಫ್ ಇಂಡಿಯಾ ಬಡಾವಣೆ	
12	ವಿಜಯನಗರ 1ನೇ ಹಂತ	
13	ವಿಜಯನಗರ 2ನೇ ಹಂತ	
14	ಹೆಬ್ಬಾಳು 1ನೇ ಹಂತ	
15	ಹೆಬ್ಬಾಳು 2ನೇ ಹಂತ	
16	ಹೆಬ್ಬಾಳು 3ನೇ ಹಂತ	
17	ಗೋಕುಲಂ 1ನೇ ಹಂತ	
18	ಗೋಕುಲಂ 2ನೇ ಹಂತ	
19	ಗೋಕುಲಂ 3ನೇ ಹಂತ	
20	ಜಯಲಕ್ಷ್ಮಿಪುರಂ	
21	ಪಡುವಾರಹಳ್ಳಿ	
22	ವಿ.ವಿ. ಮೊಹಲ್ಲಾ	
23	ಮೇದರ್ ಬ್ಲಾಕ್	
24	ಮಂಡಿ ಮೊಹಲ್ಲಾ	
25	ಕೈಲಾಸಪುರಂ ಬಡಾವಣೆ	

ಕ್ರ ಸಂ.	ಬಡಾವಣೆಯ ಹೆಸರು	ಷರಾ
26	ಮೀನಾ ಬಜಾರ್ ಬಡಾವಣೆ	
27	ವೀರನಗೆರೆ ಬಡಾವಣೆ	
28	ಬಿ.ಬಿ.ಕೇರಿ ಬಡಾವಣೆ	
29	ತಿಲಕನಗರ ಬಡಾವಣೆ	
30	ಬನ್ನಿಮಂಟಪ 'ಎ', ಬಡಾವಣೆ	
31	ಬನ್ನಿಮಂಟಪ 'ಬಿ' ಬಡಾವಣೆ	
32	ಬನ್ನಿಮಂಟಪ 'ಸಿ' ಬಡಾವಣೆ	
33	ಕೆ.ಎಸ್.ಆರ್.ಟಿ.ಸಿ ಬಡಾವಣೆ	
34	ಬನ್ನಿಮಂಟಪ ಕೈಗಾರಿಕಾ ಬಡಾವಣೆ	
35	ಬನ್ನಿಮಂಟಪ ಹುಡ್ಕೋ ಬಡಾವಣೆ	
36	ಹಳೇ ಬನ್ನಿಮಂಟಪ ಬಡಾವಣೆ	
37	ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ	
38	ಯಾದವಗಿರಿ ಬಡಾವಣೆ ಮತ್ತು ಯಾದವಗಿರಿ ಕೈಗಾರಿಕಾ ಬಡಾವಣೆ	
39	ಬಂಬೂಬಜಾರ್ ಬಡಾವಣೆ	
40	ಈದ್ಗಾ ಬಡಾವಣೆ	
41	ಬೃಂದಾವನ ಬಡಾವಣೆ	
42	ಗೋಕುಲಂ 4ನೇ ಹಂತ ಬಡಾವಣೆ	
43	ಮೇಟಗಳ್ಳಿ ಬಡಾವಣೆ ಮತ್ತು ಮೇಟಗಳ್ಳಿ ಕೈಗಾರಿಕಾ ಬಡಾವಣೆ	
44	ಸುಭಾಷ್ ನಗರ, ಈಸ್ಟ್ ಆಫ್ ಓಲ್ಡ್ ಮೈಸೂರು ರೋಡ್	
45	ಬಡೇಮಕಾನ್	
46	ದೇವನೂರು 1ನೇ ಹಂತ	
47	ದೇವನೂರು 2ನೇ ಹಂತ	
48	ದೇವನೂರು 2ನೇ ಹಂತ 2ನೇ ಫೇಸ್	
49	ದೇವನೂರು ಹುಡ್ಕೋ 3ನೇ ಹಂತ	
50	ದೇವನೂರು 3ನೇ ಹಂತ (ಭಾಗಶಃ)	
51	ಎಫ್.ಇ. ಆಫ್ ಕೆಸರೆ, ಬೆಲವತ್ತ	

ಕ್ರ. ಸಂ.	ಬಡಾವಣೆಯ ಹೆಸರು	ಷರಾ
52	ಕೆಸರೆ 1, 2 ಮತ್ತು 3ನೇ ಹಂತ, ಕುರಿಮಂಡಿ	
53	ಎನ್.ಆರ್.ಮೂಹಲ್ಲಾ	
54	ಸಿದ್ದಾರ್ಥನಗರ ಬಡಾವಣೆ(ಟಿ.ಎನ.ಪುರ ರಸ್ತೆ 1ನೇ ಹಂತ, ಟಿ.ಎನ.ಪುರ ರಸ್ತೆ 2ನೇ ಹಂತ)	
55	ಇಟ್ಟಿಗೆಗೂಡು ಬಡಾವಣೆ	
56	ಕೆ.ಸಿ.ನಗರ ಬಡಾವಣೆ	
57	ದಟ್ಟಗಳ್ಳಿ 1ನೇ.ಹಂತ,	
58	ದಟ್ಟಗಳ್ಳಿ 2ನೇ ಹಂತ,	
59	ದಟ್ಟಗಳ್ಳಿ 3ನೇ ಹಂತ, 2ನೇ ಘಟ್ಟ ಬಡಾವಣೆ ರಚಿಸಲಾಗಿದೆ. (ಒಟ್ಟು 03 ಬಡಾವಣೆಗಳು)	
60	ಕ್ಯಾತಮಾರನಹಳ್ಳಿ ಎಲ್ಲಾ ಬಡಾವಣೆಗಳು	
61	ಗಾಯಿತ್ರಿಪುರಂ ಎಲ್ಲಾ ಬಡಾವಣೆಗಳು	
62	ಸಾತಗಳ್ಳಿ 1ನೇ ಹಂತ	

ಅಧೀಕ್ಷಕ ಅಭಿಯಂತರರು
ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರ
ಮೈಸೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆದು ರಚಿಸಲಾಗಿರುವ ಖಾಸಗಿ ಬಡಾವಣೆಗಳ ವಿವರ

ಅನುಬಂಧ–2

ಕ್ರ ಸಂ.	ಬಡಾವಣೆಯ ಹೆಸರು	ಷರಾ
1	ಜಿ.ಇ.ಎಂ.ಎಲ್. ನೌ.ಗೃ.ನಿ.ಸ. ಸಂಘ ಶ್ರೀರಾಂಪುರ ಗ್ರಾಮ ಸರ್ವೆ ನಂಬರ್: 49, 50 & 53	
2	ಶ್ರೀ ಸಿ.ಹೆಚ್. ಕೋಟಿ ರೆಡ್ಡಿ ಶ್ರೀರಾಂಪುರ ಗ್ರಾಮ ಸರ್ವೆ ನಂಬರ್: 76/2	
3	ಶ್ರೀ ಡಿ.ರಾಮಕೃಷ್ಣ ರೆಡ್ಡಿ ಶ್ರೀರಾಂಪುರ ಗ್ರಾಮ ಸರ್ವೆ ನಂಬರ್: 76/1	
4	ಶ್ರೀ ಚೇತನ್ ಪಿ. ತಯಾಲ್ ಶ್ರೀರಾಂಪುರ ಗ್ರಾಮ ಸರ್ವೆ ನಂಬರ್: 132/3	
5	ಶ್ರೀ ಎಂ.ಮಹಾಲಿಂಗ ಮತ್ತು ಮಹದೇವ ಶ್ರೀರಾಂಪುರ ಗ್ರಾಮ ಸರ್ವೆ ನಂಬರ್: 115/1ಎ1, 115/1ಎ3, 113/1ಎ, 113/ಸಿ	
6	ಶ್ರೀ ಎನ್. ಸೋಮಶೇಖರ್ ಚಿಕ್ಕಹರದನಹಳ್ಳಿ ಗ್ರಾಮ ಸರ್ವೆ ನಂಬರ್: 25/1.	
7	ಶ್ರೀ ಚೆನ್ನಸಿದ್ದಯ್ಯ ಶ್ರೀರಾಂಪುರ ಗ್ರಾಮ ಸರ್ವೆ ನಂಬರ್: 135/1	
8	ಶ್ರೀ ಹೆಚ್. ಎಸ್ ಶ್ರೀನಿವಾಸ್ ಶ್ರೀರಾಂಪುರ ಗ್ರಾಮ ಸರ್ವೆ ನಂಬರ್: 78/1	
9	ಸೂರ್ಯ ಗೃ.ನಿ.ಸ. ಸಂಘ ಶ್ರೀರಾಂಪುರ ಗ್ರಾಮ ಸರ್ವೆ ನಂಬರ್: 100 ಮತ್ತು 104	
10	ವೈ.ಎಸ್. ಶಂಕರ್ ಮತ್ತು ಇತರರು ಶ್ರೀರಾಂಪುರ ಗ್ರಾಮ ಸರ್ವೆ ನಂಬರ್: 86	
ಆ	ಸದರಿ ವಿಷಯದ ಬಗ್ಗೆ ಖಾತೆಗಳನ್ನು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	ನಗರ ಪ್ರದೇಶಗಳಲ್ಲಿ ಭೂ ಪರಿವರ್ತಿಸಿದ / ಭೂ ಪರಿವರ್ತಿಸದ ಜಮೀನುಗಳಿಗೆ ವಿನ್ಯಾಸ ಅನುಮೋದನೆ ಪಡೆಯದೆ ಅನಧಿಕೃತ ಬಡಾವಣೆ / ರೆವಿನ್ಯೂ ಬಡಾವಣೆಗಳನ್ನು ನಿರ್ಮಾಣ ಮಾಡಿ, ನಿವೇಶನಗಳನ್ನು ನೋಂದಣಿ ಮಾಡಿಕೊಂಡು ಕಟ್ಟಡಗಳನ್ನು ಅನಧಿಕೃತವಾಗಿ ನಿರ್ಮಿಸುವುದರಿಂದ ಉದ್ಯಾನವನ, ಬಯಲು ಜಾಗದ ಕೊರತೆ, ನಾಗರೀಕ ಸೌಲಭ್ಯ ಕಲ್ಪಿಸುವಲ್ಲಿ ವಿಫಲತೆ, ವ್ಯವಸ್ಥಿತವಾದ ರಸ್ತೆ ಪರಿಚಲನೆ ಹಾಗೂ ಯೋಜಿತ ಬೆಳವಣಿಗೆಗಳಲ್ಲಿ ತೊಡಕುಗಳು ಆಗುತ್ತಿರುವುದನ್ನು ಗಮನಿಸಿ ಸರ್ಕಾರವು ಸುತ್ತೋಲೆ ಪತ್ರ ಸಂಖ್ಯೆ: ನಅಇ 7 ಟಿಟಿಪಿ 2017 ದಿನಾಂಕ: 22.03.2017 ರಲ್ಲಿ ಇಂತಹ ಅನಧಿಕೃತ ಬಡಾವಣೆಗಳಿಗೆ ನಗರ ಸ್ಥಳೀಯ ಸಂಸ್ಥೆಗಳು ಖಾತೆಯನ್ನು ನೀಡಬಾರದೆಂದು ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ. ನಿಯಮಬಾಹಿರವಾಗಿ ಖಾತೆ ವರ್ಗಾವಣೆ ಮಾಡುತ್ತಿರುವ ಕುರಿತು ಹಲವಾರು ದೂರುಗಳು ಸ್ವೀಕೃತವಾಗುತ್ತಿದ್ದ ಹಿನ್ನಲೆಯಲ್ಲಿ, ನಿಯಮಬಾಹಿರ ಖಾತೆ ವರ್ಗಾವಣೆಗಳನ್ನು ಗುರುತಿಸಿ ನಿಯಮಾನುಸಾರ ರದ್ದುಪಡಿಸಲು ಪೌರಾಡಳಿತ ನಿರ್ದೇಶನಾಲಯದಿಂದ ದಿನಾಂಕ: 05.01.2018ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಈ ಸುತ್ತೋಲೆಯಲ್ಲಿ ನಿಯಮಬಾಹಿರ ಖಾತೆ ವರ್ಗಾವಣೆಗಳನ್ನು ಗುರುತಿಸಿ ನಿಯಮಾನುಸಾರ ರದ್ದುಪಡಿಸಲು ಸೂಚಿಸಲಾಗಿರುತ್ತದೆ. ಅನಧಿಕೃತ ಬೆಳವಣಿಗೆಗಳನ್ನು ಸಕ್ರಮಗೊಳಿಸುವ ಉದ್ದೇಶದಿಂದ, ಕಲಂ 76 ಎಫ್ಎಫ್ ಅನ್ನು ಸೇರ್ಪಡಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ಕ್ಕೆ ತಿದ್ದುಪಡಿ ಮಾಡಲಾಗಿದ್ದು, ಇದಕ್ಕೆ ಪೂರಕವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 556 ಮೈಅಪ್ರಾ 2013 (I), ದಿನಾಂಕ: 28.05.2014 ರಲ್ಲಿ (ಅನಧಿಕೃತ ಅಭಿವೃದ್ಧಿ ಅಥವಾ ನಿರ್ಮಾಣಗಳನ್ನು ಸಕ್ರಮಗೊಳಿಸುವಿಕೆ) ನಿಯಮಗಳನ್ನು ರೂಪಿಸಲಾಗಿದೆ. ಸದರಿ ನಿಯಮಗಳನ್ವಯ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬಂದಿರುವ ಅನಧಿಕೃತ ಬೆಳವಣಿಗೆಗಳನ್ನು ಆಯಾ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರ ಮತ್ತು ಸ್ಥಳೀಯ ಸಂಸ್ಥೆಗಳು ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿ ನಿಯಮಗಳಿಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಮಧ್ಯಂತರ ಆದೇಶದಲ್ಲಿ ತಡೆಯಾಜ್ಞೆ ನೀಡಿರುವುದರಿಂದ ಜಾರಿಗೆ ತರಲು ಸಾಧ್ಯವಾಗಿರುವುದಿಲ್ಲ.

ಸಂಖ್ಯೆ: ನಅಇ 56 ಜಿಇಎಲ್ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 124 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 19-03-2020.

61
ULS
20/03/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ನಾಗನಗೌಡ ಕಂದ್ ಕೂರ್ (ಗುರುಮಿಠ್ ಕಲ್)ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2468ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ನಾಗನಗೌಡ ಕಂದ್ ಕೂರ್ (ಗುರುಮಿಠ್ ಕಲ್)ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2468ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
2) ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2468
ಸದಸ್ಯರ ಹೆಸರು	:	ಶ್ರೀ ನಾಗನಗೌಡ ಕಂದ್ ಕೂರ್ (ಗುರುಮಿಠ್ ಕಲ್)
ಉತ್ತರಿಸಬೇಕಾದ ದಿನಾಂಕ	:	20-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಗುರುಮಿಠಕಲ್ ಪುರಸಭೆಯು ಮೂಲ ಸೌಕರ್ಯಗಳಿಂದ ವಂಚಿತವಾಗಿರುವುದು ಸರ್ಕಾರರದ ಗಮನಕ್ಕೆ ಬಂದಿದೆಯೇ;	ಗುರುಮಿಠಕಲ್ ಪುರಸಭೆ ವ್ಯಾಪ್ತಿಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರವು ಈ ಕೆಳಕಂಡ ವಿವಿಧ ಯೋಜನೆಗಳಡಿ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ. 1. ಎಸ್.ಎಫ್.ಸಿ. ಮುಕ್ತನಿಧಿ 2. ಕುಡಿಯುವ ನೀರು 3. ಎಸ್.ಎಫ್.ಸಿ. ವಿಶೇಷ ಅನುದಾನ 4. 14ನೇ ಹಣಕಾಸು ಆಯೋಗದ ಅನುದಾನ 5. ಸ್ವಚ್ಛ ಭಾರತ್ ಅಭಿಯಾನ 6. ನಗರೋತ್ಥಾನ (ಮುನಿಸಿಪಾಲಟಿ) ಹಂತ-3
(ಆ)	ಹಾಗಿದ್ದಲ್ಲಿ ಈ ಪುರಸಭೆಗೆ ಮೂಲ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	
(ಇ)	ಕಳೆದ ಎರಡು ವರ್ಷಗಳಲ್ಲಿ ಗುರುಮಿಠಕಲ್ ಪುರಸಭೆಗೆ ವಿಶೇಷ ಅಭಿವೃದ್ಧಿ (ಎಸ್.ಎಫ್.ಸಿ) ಹಾಗೂ ಇತರೆ ಯಾವುದೇ ಯೋಜನೆಯಡಿ ಮಂಜೂರಾದ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು)	**ರಾಜ್ಯ ಹಣಕಾಸು ಆಯೋಗ (ಎಸ್.ಎಫ್.ಸಿ)** ಕಳೆದ ಎರಡು ವರ್ಷಗಳಲ್ಲಿ ಗುರುಮಿಠಕಲ್ ಪುರಸಭೆಗೆ ಮಂಜೂರಾದ ಅನುದಾನ ವಿವರ:

ಎಸ್.ಎಫ್.ಸಿ ಮುಕ್ತನಿಧಿ

(ರೂ. ಲಕ್ಷಗಳಲ್ಲಿ)

ವರ್ಷ	ಹಂಚಿಕೆ
2017-18	106.71
2018-19	102.00

ಎಸ್.ಎಫ್.ಸಿ ಕುಡಿಯುವ ನೀರು

(ರೂ. ಲಕ್ಷಗಳಲ್ಲಿ)

ವರ್ಷ	ಹಂಚಿಕೆ
2017-18	12.99
2018-19	30.00

ಎಸ್.ಎಫ್.ಸಿ ವಿಶೇಷ ಅನುದಾನ

(ರೂ. ಲಕ್ಷಗಳಲ್ಲಿ)

ವರ್ಷ	ಹಂಚಿಕೆ	ಷರಾ
2017-18	-	-
2018-19	400.00	ಸರ್ಕಾರದ ಆದೇಶ ಸಂಖ್ಯೆ:ನಅಇ 03 ಎಸ್.ಎಫ್.ಸಿ 2019 ದಿನಾಂಕ: 09.01.2019 ರಲ್ಲಿ ಹಂಚಿಕೆ ಮಾಡಿ ಸರ್ಕಾರದ ಪತ್ರದ ಸಂಖ್ಯೆ:ನಅಇ 222 ಎಸ್.ಎಫ್.ಸಿ 2019 ದಿನಾಂಕ:13.09.2019 ರಲ್ಲಿ ತಡೆಹಿಡಿಯಲಾಗಿದೆ.

14ನೇ ಹಣಕಾಸು ಆಯೋಗದ ಅನುದಾನ:

14ನೇ ಹಣಕಾಸು ಆಯೋಗದ ಅನುದಾನದಡಿ ಕಳೆದ ಎರಡು ವರ್ಷಗಳಲ್ಲಿ ಗುರುಮಠಕಲ್ ಪುರಸಭೆಗೆ ಮಂಜೂರಾದ ಮತ್ತು ಬಿಡುಗಡೆಯಾದ ಅನುದಾನ ವಿವರ:

(ರೂ. ಲಕ್ಷಗಳಲ್ಲಿ)

ಸಾಲು	ಹಂಚಿಕೆ
2017-18ನೇ ಸಾಲಿನ ಸಾಮಾನ್ಯ ಮೂಲ ಅನುದಾನ	82.73
2018-19ನೇ ಸಾಲಿನ ಸಾಮಾನ್ಯ ಮೂಲ ಅನುದಾನ	113.32
2019-20ನೇ ಸಾಲಿನಲ್ಲಿ ಬಿಡುಗಡೆಯಾದ 2017-18ನೇ ಸಾಲಿನ ಸಾಮಾನ್ಯ ಕಾರ್ಯನಿರ್ವಹಣಾ ಅನುದಾನ	30.81
2019-20ನೇ ಸಾಲಿನ ಸಾಮಾನ್ಯ ಮೂಲ ಅನುದಾನ	150.00

ಸ್ವಚ್ಛ ಭಾರತ್ ಯೋಜನೆ:

ಸ್ವಚ್ಛ ಭಾರತ್ ಯೋಜನೆಯಡಿ ಕಳೆದ 2 ವರ್ಷಗಳಲ್ಲಿ ಗುರುಮಿಠಕಲ್ ಪುರಸಭೆಗೆ ರೂ. 137.96 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದೆ.

ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3

ಅನುಬಂಧ-1ರಲ್ಲಿ ಲಗತ್ತಿಸಿದೆ

(ಈ) ಹಾಗಿದ್ದಲ್ಲಿ, ಮಂಜೂರಾಗಿರುವ ಅನುದಾನದಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು; ತಡೆಹಿಡಿದಿರುವ ಅನುದಾನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

ರಾಜ್ಯ ಹಣಕಾಸು ಆಯೋಗ (ಎಸ್.ಎಫ್.ಸಿ)

ಕಳೆದ ಎರಡು ವರ್ಷಗಳಲ್ಲಿ ಗುರುಮಿಠಕಲ್ ಪುರಸಭೆಗೆ ಮಂಜೂರಾದ ಅನುದಾನ ವಿವರ:

ಎಸ್.ಎಫ್.ಸಿ ಮುಕ್ತನಿಧಿ

ರೂ. ಲಕ್ಷಗಳಲ್ಲಿ

ವರ್ಷ	ಹಂಚಿಕೆ	ಬಿಡುಗಡೆ
2017-18	106.71	86.47
2018-19	102.00	82.75

ಎಸ್.ಎಫ್.ಸಿ ಕುಡಿಯುವ ನೀರು

ವರ್ಷ	ಹಂಚಿಕೆ	ಬಿಡುಗಡೆ
2017-18	12.99	12.99
2018-19	30.00	30.00

ಎಸ್.ಎಫ್.ಸಿ ವಿಶೇಷ ಅನುದಾನ

(ರೂ.ಲಕ್ಷಗಳಲ್ಲಿ)

ವರ್ಷ	ಹಂಚಿಕೆ	ಷರಾ
2017-18	-	-
2018-19	400.00	ಸರ್ಕಾರದ ಆದೇಶ ಸಂಖ್ಯೆ:ನಅಇ 03 ಎಸ್.ಎಫ್.ಸಿ 2019 ದಿನಾಂಕ: 09.01.2019 ರಲ್ಲಿ ಹಂಚಿಕೆ ಮಾಡಿ ಸರ್ಕಾರದ ಪತ್ರದ ಸಂಖ್ಯೆ:ನಅಇ 222 ಎಸ್.ಎಫ್.ಸಿ 2019 ದಿನಾಂಕ:13.09.2019 ರಲ್ಲಿ ತಡೆಹಿಡಿಯಲಾಗಿದೆ.

14ನೇ ಹಣಕಾಸು ಆಯೋಗದ ಅನುದಾನ:

14ನೇ ಹಣಕಾಸು ಆಯೋಗದ ಅನುದಾನದಡಿ ಕಳೆದ ಎರಡು ವರ್ಷಗಳಲ್ಲಿ ಗುರುಮಠಕಲ್ ಪುರಸಭೆಗೆ ಮಂಜೂರಾದ ಮತ್ತು ಬಿಡುಗಡೆಯಾದ ಅನುದಾನ ವಿವರ;

(ರೂ. ಲಕ್ಷಗಳಲ್ಲಿ)

ಸಾಲು	ಹಂಚಿಕೆ	ಬಿಡುಗಡೆಯಾದ ಅನುದಾನ
2017-18ನೇ ಸಾಲಿನ ಸಾಮಾನ್ಯ ಮೂಲ ಅನುದಾನ	82.73	82.73
2018-19ನೇ ಸಾಲಿನ ಸಾಮಾನ್ಯ ಮೂಲ ಅನುದಾನ	113.32	113.32
2019-20ನೇ ಸಾಲಿನಲ್ಲಿ ಬಿಡುಗಡೆಯಾದ 2017-18ನೇ ಸಾಲಿನ ಸಾಮಾನ್ಯ ಕಾರ್ಯನಿರ್ವಹಣಾ ಅನುದಾನ	30.81	30.81
2019-20ನೇ ಸಾಲಿನ ಸಾಮಾನ್ಯ ಮೂಲ ಅನುದಾನ	150.00	150.00

ಸ್ವಚ್ಛ ಭಾರತ್ ಯೋಜನೆ:

ಗುರುಮಿಠಕಲ್ ಪುರಸಭೆಗೆ ರೂ.137.96ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದ್ದು, ಅದರಲ್ಲಿ ಕೇಂದ್ರ ಹಾಗೂ ರಾಜ್ಯದ ಪಾಲಿನ ರೂ.67.07ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ರೂ.70.89 ಲಕ್ಷಗಳ ಅನುದಾನ ಬಿಡುಗಡೆ ಬಾಕಿಯಿರುತ್ತದೆ.

ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3

ನಗರೋತ್ಥಾನ ಯೋಜನೆಯಡಿ ಅನುದಾನದ ಕೊರತೆ ಇರುವುದಿಲ್ಲ. ಆದ್ದರಿಂದ, ಅನುದಾನವನ್ನು ತಡೆಹಿಡಿಯುವ ಪ್ರಶ್ನೆ ಉದ್ಭವಿಸುವುದಿಲ್ಲ. ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಜಿಲ್ಲಾಧಿಕಾರಿಗಳು ಬೇಡಿಕೆ ಸಲ್ಲಿಸಿದಲ್ಲಿ ಅವಶ್ಯ ಮೊತ್ತವನ್ನು ಬಿಡುಗಡೆ ಮಾಡಲಾಗುವುದು.

(ಉ)	ಹಾಗಿದ್ದಲ್ಲಿ, ಅನುದಾನವನ್ನು ತಡೆಹಿಡಿದಿರುವುದರಿಂದ ಪುರಸಭೆಯು ಮೂಲ ಸೌಲಭ್ಯಗಳಿಂದ ಕುಂಠಿತವಾಗಿರುವುದರಿಂದ ಸಾರ್ವಜನಿಕರ ಅನುಕೂಲಕ್ಕಾಗಿ ತಡೆಹಿಡಿದಿರುವ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು? (ಪೂರ್ಣ ಮಾಹಿತಿ ನೀಡುವುದು).	**ರಾಜ್ಯ ಹಣಕಾಸು ಆಯೋಗದ (ಎಸ್.ಎಫ್.ಸಿ) ಮುಕ್ತನಿಧಿ ಅನುದಾನ:** ಆರ್ಥಿಕ ಇಲಾಖೆಯ ಷರತ್ತಿನಂತೆ ಬಿಡುಗಡೆ ಮಾಡಿರುವ ಅನುದಾನದಲ್ಲಿ ಶೇ75% ರಷ್ಟು ಖರ್ಚು ಮಾಡದೇ ಇದ್ದ ಕಾರಣ 4ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಗುರುಮಿಠಕಲ್‌ಗೆ ಮಂಜೂರು ಮಾಡಲಾಗಿದ್ದ ರೂ.4.00ಕೋಟಿ ಎಸ್.ಎಫ್.ಸಿ ವಿಶೇಷ ಅನುದಾನವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 651 ವೆಚ್ಚ-9/2019, ದಿನಾಂಕ:04-09-2019ರಲ್ಲಿ ನೀಡಿರುವ ನಿರ್ದೇಶನದನ್ವಯ ಆದೇಶ ಸಂಖ್ಯೆ:ನಅಇ 222 ಎಸ್.ಎಫ್.ಸಿ 2019, ದಿನಾಂಕ:13-09-2019ರಲ್ಲಿ ತಡೆಹಿಡಿದು ಆದೇಶಿಸಲಾಗಿರುತ್ತದೆ.

ಕಡತ ಸಂಖ್ಯೆ: ನಅಇ 124 ಎಸ್.ಎಫ್.ಸಿ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು.

ಅನುಬಂಧ–1

ರೂ. ಲಕ್ಷಗಳಲ್ಲಿ

ಕ್ರಸಂ	ಯೋಜನೆ	ಹಂಚಿಕೆ	ವರ್ಷವಾರು ಬಿಡುಗಡೆ				ಒಟ್ಟು
			2016–17 ವರೆಗೆ	2017–18	2018–19	2019–20	
1	ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ ಹಂತ–3	750.00	0.00	200.00	61.96	27.91	289.87
2	ಗುಲ್ಬರ್ಗ ಸಚಿವ ಸಂಪುಟ ಅನುದಾನ	723.00	602.21	100.79	–	–	703.00
3	ಶೇಕಡ 4ರ ಪ್ರೋತ್ಸಾಹ ಧನ	300.00	0.00	–	–	–	0.00

ಮುಖ್ಯ ಅಭಿಯಂತರರು
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

22

ಕರ್ನಾಟಕ ಸರ್ಕಾರ

ಸಂಖ್ಯೆ: HORTI 133 HGM 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿ: 19-3-2020

62 ಉ.ಸ
20/3/2020

ಇವರಿಂದ:
ಸರ್ಕಾರದ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಇವರಿಗೆ:
ಕಾರ್ಯದರ್ಶಿಯವರು
ಕರ್ನಾಟಕ ವಿಧಾನ ಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಶ್ರೀ ನಾಗನಗೌಡ ಕಂದಕೂರ್, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ: 2469 ರ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ನಾಗನಗೌಡ ಕಂದಕೂರ್ ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ: 2469 ಕ್ಕೆ ತೋಟಗಾರಿಕೆ ಇಲಾಖೆಯ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

(ಜಿ.ಎಸ್.ಪ್ರಸನ್ನಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ
19/3/20

ಕರ್ನಾಟಕ ವಿಧಾನಸಭೆ

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2469
2. ಸದಸ್ಯರ ಹೆಸರು	:	ಶ್ರೀ ನಾಗನಗೌಡ ಕಂದ್ ಕೂರ್
3. ಉತ್ತರಿಸುವ ಸಚಿವರು	:	ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
4. ಉತ್ತರಿಸಬೇಕಾದ ದಿನಾಂಕ	:	20.03.2020

ಪ್ರಶ್ನೆ	ಉತ್ತರ
ಅ)2018-19ನೇ ಸಾಲಿನ ಆಯವ್ಯಯದಲ್ಲಿ ಯಾದಗಿರಿ ಜಿಲ್ಲೆಗೆ ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ರೂ. 150 ಕೋಟಿ ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು, 2018-19ನೇ ಸಾಲಿನ ಆಯವ್ಯಯದಲಿ ್ಲತೋಟಗಾರಿಕಾ ವಲಯದಲ್ಲಿ ಇಸ್ರೇಲ್ ಮಾದರಿ ನೀರಾವರಿ ಕ್ರಮಗಳನ್ನು ಕಾರವಾರ, ತುಮಕೂರು, ಯಾದಗಿರಿ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಗೊಳಿಸಲು 150 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು.
ಆ) ಹಾಗಿದ್ದಲ್ಲಿ, ಈವರೆಗೂ ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳದಿರಲು ಕಾರಣವೇನು? (ಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿನ ಕೃಷಿ ಮತ್ತು ತೋಟಗಾರಿಕೆ ವಲಯದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಪೂರಕವಾದ ಸಾಧಕ-ಭಾದಕಗಳ ಪರಿಶೀಲಿಸಿ ರೈತರಿಗೆ ಉಪಯುಕ್ತ ಸಲಹೆ ಮತ್ತು ಮಾರ್ಗದರ್ಶನಗಳ ಕಾರ್ಯಸೂಚಿಗಳನ್ನು ಅಂತಿಮಪಡಿಸಲು ಸಮಿತಿ ವರದಿಯ ಆಧಾರದ ಮೇಲೆ ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಕೃಷಿ ಮಿಷನ್ 2019ರ ಫೆಬ್ರವರಿಯಲ್ಲಿ ವಿಶೇಷ ಸಾಂಸ್ಥಿಕ ಕೃಷಿ ಮಿಷನ್ ಸ್ಥಾಪಿಸಲಾಗಿದೆ. ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯನ್ನು ಅನುಷ್ಠಾನಗೊಳಿಸಲು ಬಹಳಷ್ಟು ಪೂರ್ವ ಸಿದ್ಧತೆ ಅವಶ್ಯಕವಿರುತ್ತದೆ. ಈ ನಿಟ್ಟಿನಲ್ಲಿ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆ ಮತ್ತು ಸಂಬಂಧಪಟ್ಟ ಇಲಾಖೆ ಕಾರ್ಯದರ್ಶಿಗಳ ನೇತೃತ್ವದ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಕಾಲಕಾಲಕ್ಕೆ ಕೃಷಿ ಮಿಷನ್ ಅನುಷ್ಠಾನಗೊಳ್ಳಿಸುವ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಾದ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತದೆ. ಈ ಯೋಜನೆ ಅನುಷ್ಠಾನ ಕಾರ್ಯದಲ್ಲಿ ಸಾಮರ್ಥ್ಯಾಭಿವೃದ್ಧಿ ಮತ್ತು ಜ್ಞಾನ ವರ್ಗಾವಣೆ ಬಹುಮುಖ್ಯವಾದ ಅಂಶವಾಗಿದೆ. ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯದ ಸೇವೆಯನ್ನು ಸದರಿ ಯೋಜನೆ ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ಬಳಕ ಮಾಡಿಕೊಳ್ಳಲಾತ್ತದೆ.. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ 4 ಕೃಷಿ ಮತ್ತು 1 ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಪಾತ್ರ ಅತ್ಯಗತ್ಯವಾಗಿದೆ. ಈಗಾಗಲೇ 5 ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳೊಂದಿಗೆ ಹಲವು ಬಾರಿ ಯೋಜನೆ ಅನುಷ್ಠಾನದ ಕುರಿತು ವಿಸ್ತೃತ ಸಭೆಗಳನ್ನು ನಡೆಸಲಾಗಿದೆ. 5 ವಿಶ್ವವಿದ್ಯಾನಿಲಯಗಳ ಒಳಗೊಂಡ ಸದಸ್ಯರ ಉಪಸಮಿತಿಗಳನ್ನು ರಚಿಸಲಾಗಿದೆ. ಜೊತೆಗೆ ಯೋಜನೆಯನ್ನು ಜಾರಿಗೊಳಿಸಲು ಬೇಕಾದ ಪೂರ್ವ ಸಿದ್ಧತೆ ಮತ್ತು ಇತರೆ ಚಟುವಟಿಕೆಗಳಿಗಾಗಿ ವಿವಿಗಳು ಮತ್ತು ಇಲಾಖೆಗಳಿಗೆ ಜವಾಬ್ದಾರಿಯನ್ನು ಈ ಕೆಳಕಂಡಂತೆ

	ನೀಡಲಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಪ್ರಾತ್ಯಕ್ಷಿಕೆ ತಾಕುಗಳ ಸ್ಥಾಪನೆ, ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ರೈತರಿಗೆ ಅರಿವು ಮತ್ತು ತೋಟಗಾರಿಕಾ ಪದ್ಧತಿಗಳ ಕೈಪಿಡಿ ಸಿದ್ಧಪಡಿಸುವುದು. ರಾಯಚೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಜಾಗೃತಿ/ ಅರಿವು ಮೂಡಿಸಲು ವಿಷಯ ಸೃಜನೆ ಕುರಿತು, ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ಕೃಷಿ ಮತ್ತು ತೋಟಗಾರಿಕೆ ಪದವೀಧರರಿಗೆ ಒಂದು ವರ್ಷದ ಡಿಪ್ಲೋಮೊ ವಿಷಯ ಸಿದ್ಧಪಡಿಸುವುದು ಮತ್ತು ಬಾಗಲಕೋಟೆ, ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ಉತ್ತಮ ಕೃಷಿ ಮತ್ತು ತೋಟಗಾರಿಕೆ ಪದ್ಧತಿಗಳ ಮಾಹಿತಿ ಕ್ರೋಢೀಕರಿಸುವು ಬಗ್ಗೆ ವರದಿ ನೀಡಲು ಸೂಚಿಸಲಾಗಿತ್ತು. ಈಗಾಗಲೇ ವಿಶ್ವವಿದ್ಯಾನಿಲಯಗಳು ಕರುಡು ವರದಿಗಳನ್ನು ಸಲ್ಲಿಸಲಾಗಿದ್ದು, ಸದರಿ ವರದಿಗಳನ್ನು ಪರಿಶೀಲಿಸಿ ಮುಂದಿನ ಕ್ರಮಕ್ಕೆ ಆದ್ಯತೆ ನೀಡಲಾಗುವುದು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಜನವರಿ 10, 2020ರಂದು ಜಿಕೆವಿಕೆ, ಬೆಂಗಳೂರಿನಲ್ಲಿ ರಾಜ್ಯಮಟ್ಟದ ಒಂದುದಿನದ ಕಾರ್ಯಾಗಾರವನ್ನು ನಡೆಸಿ, ಮೇಲ್ಕಂಡ ಉಪಸಮಿತಿಗಳು ಕರುಡು ವರದಿಯನ್ನು ಒಪ್ಪಿಸಿರುತ್ತಾರೆ. ಇಒಪಿ ವೇಳೆ ಯೋಜನೆ ಅನುಷ್ಠಾನದ ಅಂತಿಮ ಹಂತದ ಸಿದ್ಧತೆಗಳ ಕುರಿತು ಸುದೀರ್ಘವಾಗಿ ಚರ್ಚೆ ನಡೆಸಲಾಯಿತು. ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಕೃಷಿ ಪದ್ಧತಿಗಳನ್ನು ರೈತರು ಅನುಸರಿಸಬೇಕಾದ ಉಪಯುಕ್ತವಾಗುವ ಮಾದರಿಗಳ ಬಗ್ಗೆ ಇತ್ತೀಚೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಕೃಷಿ ಮೇಳ 2019ರಲ್ಲಿ ವಿಶೇಷವಾದ ಪ್ರಾತ್ಯಕ್ಷಿಕೆ ತಾಕುಗಳನ್ನು ಸ್ಥಾಪಿಸಿ ರೈತರಿಗೆ ಅರಿವು ಮೂಡಿಸುವ ಕಾರ್ಯ ನಡೆಸಲಾಗಿದೆ. ಈ ಮೇಳದಲ್ಲಿ ಲಕ್ಷಾಂತರ ರೈತರು ಭಾಗವಹಿಸಿ ನೂತನ ಕೃಷಿ ಪದ್ಧತಿಗಳ ಬಗ್ಗೆ ಶಿಕ್ಷಣ ಪಡೆದಿರುತ್ತಾರೆ.
ಇ) ಕೃಷಿ ಮತ್ತು ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿ ಆಯವ್ಯಯದಲ್ಲಿ ಘೋಷಿಸಿದಂತೆ ಇಸ್ರೇಲ್ ಮಾದರಿ ಪದ್ಧತಿಯನ್ನು ಯಾವಾಗ ಜಾರಿಗೊಳಿಸಲಾಗುವುದು? (ಮಾಹಿತಿ ನೀಡುವುದು)	ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ನೀರಾವರಿ ಇಲಾಖೆಗಳ ನಡುವೆ ಸಮನ್ವಯ ಮೂಡಿಸುವುದರೊಂದಿಗೆ ವಿಶೇಷ ಕೃಷಿ ಮಿಷನ್ ಕಾರ್ಯನಿರ್ವಹಿಸುತ್ತಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯ ಮೊದಲನೇ ಹಂತದ ಅನುಷ್ಠಾನ ಕಾರ್ಯ ಜಾರಿಗೆ ತರಲು ಉದ್ದೇಶಿಸಲಾಗಿದೆ.

ಸಂಖ್ಯೆ: HORTI 133 HGM 20

(ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು

ರೇಷ್ಮೆ ಸಚಿವರು

63

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ
ಬೆಂಗಳೂರು – 560001.
ದೂ. 080–22034625 ಫ್ಯಾಕ್ಸ್: 080–2235391

ಸಂಖ್ಯೆ: ಸಿಐ 95 ಎಸ್‌ಪಿಐ 2020

ದಿನಾಂಕ 19.03.2020

20/3/2020

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ,
ಬೆಂಗಳೂರು–01.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ಅಂಚೆ ಪೆಟ್ಟಿಗೆ ಸಂಖ್ಯೆ: 5074,
ವಿಧಾನಸೌಧ, ಬೆಂಗಳೂರು–01.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನಸಭಾ ಸದಸ್ಯರಾದ ಶ್ರೀ ನಾಗನಗೌಡ ಕಂದ್‌ಕೂರ್ (ಗುರ್‌ಮಿಠ್ ಕಲ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 2470ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2470/2020,ದಿ. 07.03.2020.

*****

ದಿನಾಂಕ 20.03.2020 ರಂದು ಉತ್ತರಿಸಬೇಕಾದ ಮೇಲ್ಕಾಣಿಸಿದ ವಿಧಾನಸಭೆಯ ಪ್ರಶ್ನೆಗೆ ಉತ್ತರಗಳ 100 ಪ್ರತಿಗಳನ್ನು ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

Nagena S 19/03/2020

(ನಗೀನ .ಎಸ್)
ಪೀಠಾಧಿಕಾರಿ (ತಾಂತ್ರಿಕ ಕೋಶ) (ಪ್ರ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2470
ಸದಸ್ಯರ ಹೆಸರು : ಶ್ರೀ ನಾಗನಗೌಡ ಕಂದ್‌ಕೂರ್ (ಗುರ್‌ಮಿಠ್ ಕಲ್)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 20.03.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2020-21ನೇ ಸಾಲಿನಲ್ಲಿ ಹುಬ್ಬಳ್ಳಿಯಲ್ಲಿ ನಡೆದಿರುವ "ಇನ್‌ವೆಸ್ಟ್ ಕರ್ನಾಟಕದ" ಸಮಾವೇಶದಲ್ಲಿ ಭಾಗವಹಿಸಿದ ಉದ್ಯಮಿಗಳೆಷ್ಟು;	ಈ ಸಮಾವೇಶದಲ್ಲಿ ಸುಮಾರು 2000 ಜನರು ಭಾಗವಹಿಸಿದ್ದರು.
ಆ)	ಹಾಗಿದ್ದಲ್ಲಿ, ಈ ಉದ್ಯಮಿಗಳು ಯಾದಗಿರಿ ಜಿಲ್ಲೆಯ ಕಡೇಚೂರು ಮತ್ತು ಬಾಡಿಹಾಳ ಕೈಗಾರಿಕಾ ಪ್ರದೇಶದಲ್ಲಿ ಯಾವ ಯಾವ ಕಾರ್ಖಾನೆ ತೆರೆಯಲು ಒಪ್ಪಂದ ಮಾಡಿಕೊಂಡಿದ್ದಾರೆ; (ವಿವರ ನೀಡುವುದು)	ಯಾದಗಿರಿ ಜಿಲ್ಲೆಯ ಕಡೇಚೂರು ಮತ್ತು ಬಾಡಿಹಾಳ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು 10 ಯೋಜನೆಗಳು ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.
ಇ)	ಹಾಗಿದ್ದಲ್ಲಿ, ಸದರಿ ಉದ್ಯಮಿಗಳು ತೆರೆಯಲಿರುವ ಕಾರ್ಖಾನೆಗಳಿಗೆ ಎಷ್ಟು ಬಂಡವಾಳ ಹೂಡಲು ಒಪ್ಪಂದ ಮಾಡಿಕೊಳ್ಳಲಾಗಿದೆ;	ಈ 10 ಒಡಂಬಡಿಕೆಯಿಂದ ರೂ.796.90 ಕೋಟಿ ಬಂಡವಾಳ ಹೂಡಿಕೆಯಾಗಲಿದೆ.
ಈ)	ಸದರಿ ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಸ್ವಾಧೀನಪಡಿಸಿಕೊಂಡಿರುವ ಒಟ್ಟು ಜಮೀನು ಎಷ್ಟು; ಇದರಲ್ಲಿ ಈಗಾಗಲೇ ಎಷ್ಟು ಎಕರೆ ಜಮೀನಿಗೆ ಪರಿಹಾರ ನೀಡಲಾಗಿದೆ; ಉಳಿದ ಜಮೀನಿಗೆ ಯಾವಾಗ ಪರಿಹಾರ ನೀಡಲಾಗುವುದು? (ಗ್ರಾಮವಾರು ಸರ್ವೆ ನಂಬರ್‌ವಾರು ಹೆಸರು ಮತ್ತು ಪೂರ್ಣ ವಿವರ ನೀಡುವುದು)	ಯಾದಗಿರಿ ಜಿಲ್ಲೆಯ ಕಡೇಚೂರು ಮತ್ತು ಬಾಡಿಹಾಳ ಗ್ರಾಮಗಳಲ್ಲಿ ಒಟ್ಟು 3232-22 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ದಿನಾಂಕ 30.12.2011 ರಂದು ಕಲಂ 28(4) ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಈ ಪೈಕಿ ಇದುವರೆಗೆ ಒಟ್ಟು 3007-21 ಎಕರೆ ಜಮೀನಿಗೆ ಪರಿಹಾರ ಪಾವತಿಸಲಾಗಿದೆ. ಉಳಿಕೆ 225-01 ಎಕರೆ ಜಮೀನಿಗೆ ಪರಿಹಾರ ಪಾವತಿಸಲು ಬಾಕಿ ಇದ್ದು ಸದರಿ ಜಮೀನಿನ ಪರಿಹಾರ ಪಾವತಿ ಕಾರ್ಯವನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲಾಗುವುದು. ಪರಿಹಾರ ಪಾವತಿಗೆ ಬಾಕಿ ಇರುವ ಸರ್ವೆ ನಂಬರ್‌ವಾರು ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ.

ಸಿಐ 95 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಅನುಬಂಧ-1

List of MOU signed Companies at "Invest Karnataka-Hubli Conference" held at Denisson Hotel Hubballi on 14.02.2020 - Kadachur Industrial Area, Yadgiri District. LAQ-2470

Sl. No	Company Name & Address	Location/ District	Activity	Expected Investment (in Rs Cr)	Employment
1	Bhagiradha chemicals and Industries Ltd Plot No. 3, Sagar Society., Road No. 2, Banjara Hills, Hyderabad, Telangana 500034	Kadechur Industrial Area, Yadgir	Manufacture of Agrochemicals	345.00	1200
2	INDUR LIFE SCIENCES PVT LTD PLOT NO 14/202,PRESTIGE PARK,GUNDLAPOCHAMPALLY(V)MEDCHAL (D) HYDERABAD,TELANGANA– 500 014.	Kadechur Industrial Area Yadgir	BULK DRUGS AND INTERMEDIATES	16.00	60
3	Hari Pharma Plot No.596, Matrusri nagar, Miyapur,Hyderabad-500049,Telangana– 500049	Kadechur Industrial Area Yadgir	Bulk Drugs & Intermediates Formulations manufacturing	16.00	90
4	Monashi Life Sciences Pvt Ltd Flat No. 215, Bhanu Enclave, Besides ESI Hospitals, Erragadda, Hyderabad – 500038.	Kadechur Industria Area Yadgir	Manufacturing of Bulk Drugs &Intermediates	20.00	150
5	Shilpa Albumin Pvt Ltd. Plot 531, 532A, Belur Industrial Area, Dharwad-580011	Kadechur Yadgir,	Commercial Production of Recombinant Human Albumin, Commercial Production of Recombinant Peptides, analogues & Polymers	221.00	220
6	Ravoos Laboratories Ltd., Flat No. S201, SVSS Nivas, C-Zech Colony, Opp. Gokul Theatre, Sanath Nagar, Hyderabad – 500018.	Kadechur industrial Area, Yadgir	Manufacturing of Bulk Drugs &Intermediates	43.50	164
7	Adarsha Pharmaceutical Industry Supermarket Main Road, Kalaburagi-585103	Kadechur Industrial Area, Yadgir	Nifedipine, Phenyl Ephrine HCl, Sideenafil Citrate, Ursodexycholic acid manufacturing	40.00	90
8	Jet Life Sciences A-17, Cooperative Industrial Estate Balanagar,Hyderabad-500037	Kadechur Industria Area Yadgir	Bulk Drugs & Intermediates Manufacturing	19.50	140
9	Sriya Fine Chemicals Pvt Ltd 5-5-35/2, Plot No.46, Flat No.5 Prasanthi Nagar Hyderabad-500072, Telangana	Kadechur industrial Area, Yadgir	Bulk Drugs & Intermediates Manufacturing	26.10	160
10	Astragen Laboratories Pvt.ltd., Plot 306-A,3rd Floor,Block-A,House No.7-2-1735, Plot No.4, Sy No.60/9,ENDECO's Alladin County, CZECH colony, Sanath Nagar, Hyderabad-500018,Telangana	Kadechur Industrial Area, Yadgir	Bulk Drugs & Intermediates Manufacturing	49.80	220
	Total			796.90	2494

ಅನುಬಂಧ - 2

ಯಾದಗಿರ ಜಿಲ್ಲೆ ಯಾದಗಿರ ತಾಲೂಕಿನ ಕಡೇಚೂರು ಮತ್ತು ಬಾಡಿಯಾಳ ಗ್ರಾಮಗಳಲ್ಲಿ ಭೂಸ್ವಾಧೀನ ಪಡಸಿಕೊಂಡ ಒಟ್ಟು ವಿಸ್ತೀರ್ಣ 3232-22 ಎಕರೆ ಜಮೀನುಗಳ ಪೈಕಿ ಪರಿಹಾರ ಪಾವತಿಸಲು ಬಾಕಿ ಇರುವ ಭೂಮಾಲೀಕರ ಯಾದಿ.

ಗ್ರಾಮ : ಕಡೇಚೂರು

ಕ್ರಸಂ	ಭೂಮಾಲೀಕರ ಹೆಸರು	ಸರ್ವೆ ನಂ	ಭೂ ಪರಿಹಾರ ಪಾವತಿಸಬೇಕಾದ ವಿಸ್ತೀರ್ಣ (ಎ-ಗು)	ಷರಾ
01	02	03	04	05
01	ಹುಸೇನಸಾಬ ಚಂದಾಪೂರ	431 ಪೈಕಿ	00-38	-
02	ಹುಸೇನಸಾಬ ಚಂದಾಪೂರ	431 ಪೈಕಿ	2-05	-
03	ತಾಯಪ್ಪ ತಂ. ಹಣಮಪ್ಪ ಪೆಂಡ್ರೆ	432 ರ ಪೈಕಿ	3-33	-
04	ದೊಡ್ಡ ನರಸಪ್ಪ ತಂ. ನರಸಪ್ಪ	441 ಪೈಕಿ	4-34	-
05	ಭೀಮಣ್ಣ ತಂ. ಚಂದ್ರಪ್ಪ ದುಪ್ಪಲ್ಲಿ	462 ರ ಪೈಕಿ	5-07	-
06	ಮಹಬೂಬ ಹುಸೇನಸಾಬ ತಂ. ಬಡೆಸಾಬ	504 ರ ಪೈಕಿ	1-16	-
07	ಮಾಶಿನಬಿ ಗಂ. ಬುಡೆಸಾಬ	504 ರ ಪೈಕಿ	0-16	-
08	ಹುಸೇನಸಾಬ ತಂ. ಲಾಡ್ಲೆಸಾಬ	505 ರ ಪೈಕಿ	00-24	-
09	ಶೇಖ ಹುಸೇನಸಾಬ ತಂ. ಬಾವಾಸಾಬ	505 ರ ಪೈಕಿ	00-06	-
10	ಮಹಬೂಬ ಹುಸ್ಸೇನಸಾಬ ತಂ. ಬುಡೆಸಾಬ	506	00-06	-
11	ಮಹಬೂಬ ಹುಸ್ಸೇನಸಾಬ ತಂ. ಬುಡೆಸಾಬ	506	00-06	-
12	ಹುಸ್ಸೇನಸಾಬ ತಂ. ಲಾಡ್ಲೇಸಾಬ	506	1-26	-
13	ಸಿದ್ದಪ್ಪ ತಂ. ಶರಣಪ್ಪ ಪಾಟೀಲ	509 ಪೈಕಿ	2-31	-
14	ಹಸನಸಾಬ ತಂ. ಮಹ್ಮದ	538 ರ ಪೈಕಿ	00-37	-
15	ಮಗದ್ಮಅಲಿ ತಂ. ಬುರಾನಸಾಬ	539 ಪೈಕಿ	00-37	-
16	ಹಸನಸಾಬ ತಂ. ಹಸಾನಬಾಯಿ	539 ಪೈಕಿ	00-11	-
17	1) ಅಲಿಮ ಹುಸೇನ ತಂ. ಬುಡೇಸಾಬ 2) ಚಾಂದಪಾಷಾ ತಂ. ಬುಡೇಸಾಬ	539 ಪೈಕಿ	00-16	-
18	1) ಅಲಿಮ ಹುಸೇನ ತಂ. ಬುಡೇಸಾಬ 2) ಚಾಂದಪಾಷಾ ತಂ. ಬುಡೇಸಾಬ	539 ಪೈಕಿ	00-16	-
19	ಹಸನಸಾಬ ತಂ. ಹಸಾನಬಾಯಿ	539 ಪೈಕಿ	00-06	-
20	ಖಾಜಾಹುಸೇನ ತಂ. ಮೌಲಾನಸಾಬ	545 ಪೈಕಿ	4-02	-
21	1) ಮಹಬೂಬ ಹುಸೇನ ತಂ. ಮೌಲಾನಸಾಬ 2) ಖಾಜಾ ಹುಸೇನ ತಂ. ಮೌಲಾನಸಾಬ	548 ಪೈಕಿ	6-15	-

01	02	03	04	05
22	ಖಾಜಾಸಾಬ ತಂ. ಹುಸೇನಸಾಬ	549 ರ ಪೈಕಿ	1–22	–
23	ಹಸನಅಲಿ ತಂ. ಹುಸೇನಸಾಬ	549 ಪೈಕಿ	0–22	–
24	ಚಂದ್ರಕಲಾ ತಂ. ಸಂಗರೆಡ್ಡಿ	610	12–27	–
25	ಬುಡೇಪ್ಪ ತಂ. ಕರೇಪ್ಪ	621	1–02	–
26	ಬುಡೇಪ್ಪ ತಂ. ಕರೇಪ್ಪ	624	1–36	–
27	ಸಿದ್ದಪ್ಪ ತಂ. ನರಸಪ್ಪ ತೊರಣತಿಪ್ಪಿ	628	2–12	–
28	ಸಿದ್ದಪ್ಪ ತಂ. ನರಸಪ್ಪ ತೊರಣತಿಪ್ಪಿ	628	5–00	–
29	ಚನ್ನಮ್ಮ ಗಂ. ಶರಣಪ್ಪ ಪಾಟೀಲ	660	11–00	–
30	ಶ್ರೀ. ಷ.ಬ್ರ. ಗುರುಮೂರ್ತಿ ಶಿವಾಚಾರ್ಯರು	661	16–18	–
31	ಶ್ರೀ. ಷ.ಬ್ರ. ಗುರುಮೂರ್ತಿ ಶಿವಾಚಾರ್ಯರು	662	17–32	–
32	1) ಖಾಸಿಂಅಲಿ ತಂ. ಖಾಸಿಂಸಾಬ 2) ಜಹೀರ ಅಹ್ಮದ ತಂ. ಖಾಸಿಂಸಾಬ	664	5–01	–
33	ಹಣಮಂತ ತಂ. ಯಲ್ಲಪ್ಪ	679	1–06	–
34	ಬಾಷ್ಯಸಾಬ ತಂ. ಹುಸೇನಸಾಬ	702	1–23	–
35	ಜಮೀರಹುಸೇನ ತಂ. ದಾದೆಸಾಯಿಕ	714 ಪೈಕಿ	0–12	–
36	ವಕ್ಫ್ ಜಮೀನು	715, 716, 717, 718, 719	89–12	–

205-23

<u>ಗ್ರಾಮ : ಬಾಡಿಯಾಳ</u>

ಕ್ರ.ಸಂ	ಭೂಮಾಲೀಕರ ಹೆಸರು	ಸರ್ವೆ ನಂ	ಭೂ ಪರಿಹಾರ ಪಾವತಿಸಬೇಕಾದ ವಿಸ್ತೀರ್ಣ (ಎ–ಗು)	ಷರಾ
01	02	03	04	05
01	ಯಲ್ಲಾರಿ ತಂ. ಹಣಮಂತ ಕಟ್ಟಗರ	62	1–23	–
02	ಕಮಲಕಾಂತ ತಂ. ಕೃಷ್ಣಾಜಿ	62	1–22	–
03	ಕೃಷ್ಣಾಜಿ ತಂ. ಕಾಸಿಂಸಾಬ ಕಟ್ಟಗರ	62	1–22	–
04	ನರಸಮ್ಮ ಗಂ. ಲಕ್ಷ್ಮಣ ಕಟ್ಟಗರ	62	1–22	–
05	ಸಕ್ರಪ್ಪ ತಂ. ಭೀಮಣ್ಣ ಕೊತ್ತಾಪಲ್ಲಿ	76	5–09	–
06	1) ಲಚಮಣ್ಣ ತಂ. ಸಾಬಣ್ಣ 2) ಮಲ್ಲಪ್ಪ ತಂ. ಸಾಬಣ್ಣ ಉಳ್ಳೇಸೂಗೂರ	82	7–11	–
07	ಶಿವಲಿಂಗಪ್ಪ ತಂ. ಶಿವಪ್ಪ ಸಜ್ಜನಶೆಟ್ಟಿ	85/3	0–29	–

19-18

[illegible] 225-01

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	537
ಸದಸ್ಯರ ಹೆಸರು	:	ಶ್ರೀ ರಾಘವೇಂದ್ರ ಬಸವರಾಜ್ ಹಿಟ್ನಾಳ್ ಕೆ. (ಕೊಪ್ಪಳ)
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ	:	20.03.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಜರುಗಿದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಗಳೆಷ್ಟು;	2016 ರಲ್ಲಿ ಒಂದು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ "ಇನ್‌ವೆಸ್ಟ್ ಕರ್ನಾಟಕ-2016" ನ್ನು ಆಯೋಜಿಸಲಾಗಿದೆ.
ಆ	ಮೇಲ್ಕಂಡ ಅವಧಿಯಲ್ಲಿ ರಾಜ್ಯ ಉನ್ನತ ಮಟ್ಟದ ಹೂಡಿಕೆ ಒಪ್ಪಿಗೆ ಸಮಿತಿ (**SHLCC**) ಹಾಗೂ ರಾಜ್ಯ ಏಕಗವಾಕ್ಷಿ ಹೂಡಿಕೆ (**SLSWCC**) ಸಮಿತಿ ನಡೆಸಿದ ಸಭೆಗಳೆಷ್ಟು;	ಮೇಲ್ಕಂಡ ಅವಧಿಯಲ್ಲಿ (2016-17 ರಿಂದ 2018-19 ರವರೆಗೆ) 09 ರಾಜ್ಯ ಉನ್ನತ ಮಟ್ಟದ ಹೂಡಿಕೆ ಒಪ್ಪಿಗೆ ಸಮಿತಿ (SHLCC) ಸಭೆಗಳನ್ನು ಹಾಗೂ 25 ರಾಜ್ಯ ಮಟ್ಟದ ಏಕಗವಾಕ್ಷಿ ಹೂಡಿಕೆ (SLSWCC) ಸಮಿತಿ ಸಭೆಗಳನ್ನು ನಡೆಸಲಾಗಿದೆ.
ಇ	ಜಾಗತಿಕ ಬಂಡವಾಳ, ಉನ್ನತ ಮಟ್ಟದ ಹೂಡಿಕೆ ಸಭೆ, ರಾಜ್ಯ ಏಕಗವಾಕ್ಷಿ ಹೂಡಿಕೆ ಮತ್ತು ಸದರಿ ಸಭೆಗಳಿಂದ ಅನುಮೋದನೆಗೊಂಡ ಯೋಜನೆಗಳು ಮತ್ತು ಪ್ರಸ್ತಾವನೆಗಳೆಷ್ಟು;	"ಇನ್‌ವೆಸ್ಟ್ ಕರ್ನಾಟಕ-2016" ಸಮಾವೇಶದಲ್ಲಿ 122 ಕೈಗಾರಿಕೆಗಳ ಜೊತೆಯಲ್ಲಿ ಸರ್ಕಾರದಿಂದ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಇವುಗಳ ಬಂಡವಾಳ ಹೂಡಿಕೆ 1,27,821 ಕೋಟಿ ರೂಪಾಯಿಗಳಾಗಿರುತ್ತದೆ ಹಾಗೂ 169880 ಉದ್ಯೋಗ ಸೃಜನೆಯಾಗಲಿದೆ. ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. ಮುಂದುವರೆದು, 2016-17 ರಿಂದ 2018-19 ರವರೆಗೆ ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ (**SHLCC**) ಸಮಿತಿ ಸಭೆಗಳಲ್ಲಿ 33 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ 48733.17 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 180072 ಜನರಿಗೆ ಉದ್ಯೋಗವಾಕಾಶ ಸೃಜನೆಯಾಗಲಿದೆ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ 748 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ 55049.30 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 371384 ಜನರಿಗೆ ಉದ್ಯೋಗವಾಕಾಶ ಸೃಜನೆಯಾಗಲಿದೆ. ವಿವರಗಳು ಕೆಳಕಂಡಂತಿವೆ.

ವರ್ಷ	ಅನುಷ್ಠಾನಗೊಂಡ ಯೋಜನೆಗಳ ಸಂಖ್ಯೆ		ಬಂಡವಾಳ ಹೂಡಿಕೆ		ಉದ್ಯೋಗ ಸೃಜನೆ	
	SHLCC	SLSWCC	SHLCC	SLSWCC	SHLCC	SLSWCC
2016-17	13	256	14226.39	19572.07	60497	95608
2017-18	15	336	30119.01	23356.61	67616	203349
2018-19	5	156	4387.77	12120.62	51959	72427
ಒಟ್ಟು	33	748	48733.17	55049.30	180072	371384

<table>
<tr>
<td>ಈ</td>
<td>ಹಾಗಿದ್ದಲ್ಲಿ, ಅನುಮೋದನೆ ನೀಡಲಾದ ಪ್ರಸ್ತಾವನೆಗಳಲ್ಲಿ ಎಷ್ಟು ಸಂಸ್ಥೆಗಳು/ಕಾರ್ಖಾನೆಗಳು ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ; ಎಷ್ಟು ಬಂಡವಾಳ ಹೂಡಿಕೆಯಾಗಿದೆ ಎಷ್ಟು ಉದ್ಯೋಗ ಸೃಷ್ಟಿಸಲಾಗಿದೆ? (ವಾರ್ಷಿಕವಾರು ಸಂಪೂರ್ಣ ಮಾಹಿತಿ ನೀಡುವುದು)</td>
<td>ಅನುಮೋದನೆ ನೀಡಲಾದ ಪ್ರಸ್ತಾವನೆಗಳ ಪೈಕಿ 59 ಯೋಜನೆಗಳು ಅನುಷ್ಠಾನಗೊಂಡಿದ್ದು, 9781.07 ಕೋಟಿ ಬಂಡವಾಳ ಹೂಡಿಕೆಯಾಗಿರುತ್ತದೆ ಹಾಗೂ 30638 ಜನರಿಗೆ ಉದ್ಯೋಗವಾಕಾಶ ಸೃಜನೆಯಾಗಿದೆ. ವಿವರ ಕೆಳಕಂಡಂತಿದೆ.
<table>
<tr><th>ವರ್ಷ</th><th colspan="2">ಅನುಷ್ಠಾನಗೊಂಡ ಯೋಜನೆಗಳ ಸಂಖ್ಯೆ</th><th colspan="2">ಬಂಡವಾಳ ಹೂಡಿಕೆ</th><th colspan="2">ಉದ್ಯೋಗ ಸೃಜನೆ</th></tr>
<tr><th></th><th>SHLCC</th><th>SLSWCC</th><th>SHLCC</th><th>SLSWCC</th><th>SHLCC</th><th>SLSWCC</th></tr>
<tr><td>2016-17</td><td>3</td><td>40</td><td>2439.0</td><td>4656.73</td><td>13400</td><td>13014</td></tr>
<tr><td>2017-18</td><td>1</td><td>13</td><td>1110.0</td><td>1162.51</td><td>800</td><td>2926</td></tr>
<tr><td>2018-19</td><td>0</td><td>2</td><td>-</td><td>412.83</td><td>0</td><td>498</td></tr>
<tr><td>ಒಟ್ಟು</td><td>4</td><td>55</td><td>3549.0</td><td>6232.07</td><td>14200</td><td>16438</td></tr>
</table>
ವಾರ್ಷಿಕವಾರು, ಘಟಕವಾರು, ಬಂಡವಾಳ ಹೂಡಿಕೆ ಮತ್ತು ಉದ್ಯೋಗವಾರು ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.</td>
</tr>
</table>

ಸಿಐ 84 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

LAQ-537. ಅನುಬಂಧ-1

MoUs SIGNED DURING Invest Karnataka 2016
DISTRICT WISE

No	Name of the District	No. of projects	Investments in Rs. (Crores)	Employments (No.s)
1	BAGALKOT	2	150	400
2	BANGALORE RURAL	6	9230	3400
3	BANGALORE URBAN	19	11630	62885
4	BELGAUM	5	535	1900
5	BELLARY	3	2350	2400
6	BIDAR	3	370	2450
7	CHAMARAJANAGAR	1	40	250
8	CHIKKABALLAPURA			
9	CHIKKAMAGALURU	1	50	100
10	CHITRADURGA			
11	DAKSHINA KANNADA	3	650	625
12	DAVANAGERE	1	75	250
13	DHARWAD	3	615	10350
14	GADAG			
15	GULBARGA			
16	HASSAN	1	300	600
17	HAVERI	1	350	300
18	KOLAR	1	500	1200
19	KOPPAL	1	170	500
20	MADIKERI			
21	MANDYA	5	298	425
22	MYSORE	3	139	1300
23	RAICHUR			
24	RAMANAGAR	3	950	3600
25	SHIVAMOGGA	1	8	15
26	TUMKUR	8	2880	4400
27	UDUPI			
28	UTTAR KANNADA	1	100	100
29	VIJAYAPURA	1	100	200
30	YADGIR	2	2000	1100
31	ACROSS KARNATAKA	47	94331	71130
	Grand Total	**122**	**127821**	**169880**

LAQ-537 ಅನುಬಂಧ-2

LIST OF SLSWCC AND SHLCC APPROVED & IMPLEMENTED PROJECTSFROM LAST 3 YEARS (2016-17 TO 2018-19)										
Sl. No.	Committee	Company_Name	Project Location	Product	Date of Approval	Mtg No	Investment (INR Cr)	Employment (Nos.)	Land (Acres)	Year
1	SHLCC	MANIPAL HEALTH ENTERPRISES LTD.,	Hebbal Bangalore, Whitefield Bangalore and Mangalore	Health Care Services	28-Sep-16	45	1121	1000	5.2	2016-17
2	SHLCC	EMBASSY PROPERTY DEVELOPMENTS PVT LTD.	Belur Nagasandra and Challaghatta Villages of Varthur Hobli, Bengaluru East Taluk, Bengaluru Urban District	IT/ITES Park	28-Sep-16	45	718	11800	13.23	2016-17
3	SHLCC	JSW PAINTS LTD.,	Toranagallu and Musenayakanahalli Villages Sandur Taluk, Ballari District	Paints	28-Sep-16	45	600	600	67	2016-17
4	SHLCC	TVS Motor Company Limited	Bythahalli village, Kadakola post, Mysuru District	Two Wheelers manufacturing unit	31-Aug-17	48	1110	800	20	2017-18
						Sub Total	3549.00	14200		
5	SLSWCC	WILDERNESS LODGE PVT LTD DASWAL DEEPAK, MEDIKERI, MERCARA, NEAR BASAPPA SHISHUVIHAR, MADIKERI-571201,	Sy.Nos. 76/2, 76/4, 77,78/1, 78/2, 78/3, 79, 81/4, 117/1, 117/2 and 121 of Mekeri Village, Sampaje Grama, Madikeri Taluk, Kodagu District	Tourism Resorts	30-Apr-16	91	150	218	27 Acres 8 Guntas	2016-17
6	SLSWCC	NIRANI SUGARS LTD. #904, 9TH FLOOR, WORLD TRADE CENTRE, BRIGADE GATEWAY CAMPUS, NEAR ORION MALL, RAJAJINAGAR, BANGALORE-560055,	Kulalli Cross Road, Mudhol, Jamkhandi Taluk, Bagalkot District.	Sugar	30-Apr-16	91	113.95	70	100 acres	2016-17
7	SLSWCC	HARITA FEHRER LIMITED BELAGONDAPALLI, KRISHNAGIRI-635114, TAMILNADU	Plot No.40 of Kadakola Industrial Area	Polyurethane based two wheeler seats for motorcycles and scooters	30-Apr-16	91	40.5	152	5.5	2016-17
8	SLSWCC	TVS MOTOR COMPANY LTD. P.B.NO.4, HARITA ROAD, HOSUR, KRISHNAGIRI-635109	Nanjangud Ind area, Nanjangud	Two wheelers	30-Apr-16	91	310	200	-	2016-17

9	SLSWCC	THE SOUTH INDIA PAPER MILLS LTD 1205-06, PRESTIGE MERIDIAN -2, M.G.ROAD, BANGALORE-560001	Chikkayanachatra Village, Nanjangud Taluk, Mysore Distric	CORRUGATED FIBRE BOARD AND BOXES, PAPER AND PAPER BOARDS,, POWER	30-Apr-16	91	69	50	-	2016-17
10	SLSWCC	CHENGUANG NATURAL EXTRACTS INDIA PVT LTD NO. 38/1, 8TH WARD, OLD HOSPITAL ROAD, GUNDLUPETE, CHAMARAJANAGAR-571111	Survey Number 262/1 and 262/2, change of Sy.Nos from 264/2A,2B to Sy.Nos. 264	Marigold pellete and extraction plant	30-Apr-16	91	0.98	10	7 Acre 16 Gunta	2016-17
11	SLSWCC	KIRLOSKAR FERROUS INDUSTRIES LTD. BEVINAHALLI VILLAGEP.O. HITNALTALUKA, KOPPAL - 583234	Sy.No.194, Bevinahalli Village, Koppal Taluk and District	Machining of Iron Castings	27-May-16	92	179.8	220	12	2016-17
12	SLSWCC	SATTVA CFS AND LOGISTICS PVT. LTD. NEW 153 OLD 82 SANTHOME HIGH ROAD., LEVEL 4 HIGH GATE, RA PURAM, CHENNAI - 600028	Vemgal Industrial Area, Kolar District	Container Freight Station	27-May-16	92	43	137	6 acre 17 Gunta	2016-17
13	SLSWCC	HERMES DISTILLERY PVT. LTD. YADRAV VILLAGE, RAIBAG TALUK, BELGAUM	Yadrav Village, Raibagh Taluk, Belagavi	28 KLPD Non Molasses based & Distilling, Bottling of 10,000 cases per day and 8 MW Co-gen Power Plant	27-May-16	92	269.91	0	25	2016-17
14	SLSWCC	MPP TECHNOLOGIES PVT. LTD., SOMPURA INDUSTRILA AREA, NELAMANGALA TALUK, BENGALORE RURAL DIST.	Averahalli Industrial Area, Dabaspet 4th Phase,	Transformers	27-May-16	92	28	0	2	2016-17
15	SLSWCC	ATHANI FARMERS SUGAR FACTORY LTD, VISHUNAGAR VILLAGE, NAVALIHAL POST, ATHANI TALUK, BELAGAVI	Vishunagar village, Navalihal post, Athani taluk, Belagavi Dist.	24 MW to 29.7 MW Co-gen power plant	27-May-16	92	20	0	0	2016-17

16	SLSWCC	ASHOK IRON & WORKS PVT. LTD. PLOT NO.9, 10,11, MAJGAON ROAD, UDYAMBAG, BELGAVI - 590008	Machhe Industrial Area, Machhe Village, Belgaum District.	Block Heads and Housings	3-Aug-16	93	103	1175	29.32	2016-17
17	SLSWCC	ASHOK IRON & WORKS PVT. LTD. PLOT NO.9, 10,11, MAJGAON ROAD, UDYAMBAG, BELGAVI - 590008	Navage Industrial Area, Machhe village, Belgaum District.	Machining	3-Aug-16	93	74.92	470	29.8	2016-17
18	SLSWCC	ASHOK IRON & WORKS PVT. LTD. PLOT NO.9, 10,11, MAJGAON ROAD, UDYAMBAG, BELGAVI - 590008	Machhe Industrial Area, Machhe village, Belgaum District	Cylinder Block Head Housing	3-Aug-16	93	40.17	722	14.2	2016-17
19	SLSWCC	BAGMANE DEVELOPERS PRIVATE LIMITED CV RAMAN NAGARA BLOCK 8TH FLOOR, BAGMANE TECH PARK BANGALORE - 560093	Sy.Nos.42/2, 42/3 of Doddenakundi Village, Bangalore East Taluk, Bangalore Urban District.	IT/ITES SEZ	3-Aug-16	93	300.5	160	3.12	2016-17
20	SLSWCC	BRIGADE ENTERPRISES LTD BRIGADE GATEWAY CAMPUS, 26/1 DR.RAJKUMAR ROAD, MALLESHWARAM29TH & 30TH FLOOR, WORLD TRADE CENTRE BANGALORE	Gandhinagar, Bangalore.	3 Star Business Class Hotel	3-Aug-16	93	99.6	170	1.8	2016-17
21	SLSWCC	GEM PAINTS LTD. NO.417/418, 11TH CROSS, 4TH PHASE, PIA, BANGALORE	Sompura 2nd Stage Industrial Area, Nelamangala Taluk, Banglore Rural District.	Paints, Resins, Varnishes, Thinner and Allied Products	3-Aug-16	93	10	10	2	2016-17
22	SLSWCC	GOLDEN HATCHERIES QUEENS ROAD NO.3, QUEENS ROAD CROSS, BANGALORE – 52	Hooyidure Village, Bukkapatna Hobli, Sira, Tumkur.	Solar Energy	3-Aug-16	93	262.5	366	210	2016-17

23	SLSWCC	HI-TECH PLAST LTD. SENAPATI BAPAT MARG, LOWER PAREL (W) 201, WELSPUN HOUSE, KAMLA MILLS, MUMBAI – 400013	Plot 478, 485-487, 508, Immavu Industrial Area, Nanjangud Taluk, Mysore District.	Rigid Plastic Containers	3-Aug-16	93	97	60	20	2016-17
24	SLSWCC	INTEL TECHNOLOGY INDIA PRIVATE LIMITED # 23-56 P, DEVARABEESANHALLI , VARTHUR HOBLI, OUTER RING ROAD, BELLANDUR POST, BANGALORE – 03	Devarabeesanhalli Varthur Hobli, Bangalore East Taluk, Banglore Urban District.	Multi level car parking	3-Aug-16	93	210	50	4	2016-17
25	SLSWCC	SAMARTH BIO TECH LTD. NO.26, GREEN GARDEN, GOKUL ROAD, HUBLI26, GREEN GARDEN, HUBBALI – 580 030	Ramanakoppa Village, Kundgol Taluk and Tarihal Indutrial Area, Hubli Taluk, Dharwad District).	Vermi Compost, Bio Fertilisers, Granulated Organic Manure, Secondary nutrients, Micro Nutrients, Organic Plant growth promoters, Neem based organic pesticides, Biopesticids	3-Aug-16	93	15.4	36	5.36	2016-17
26	SLSWCC	SHAHI EXPORTS PVT. LTD. SY.NO.13,14 & 15, SARJAPURA MAIN ROAD, BELANDUR GATE, BANGALORE	Nidge Industrial Area, Shimoga Taluk, Shimoga District.	Weaving and Processing	3-Aug-16	93	426.57	2000	33.17	2016-17
27	SLSWCC	SHILPA MEDICARE LTD. FLAT 204 BLOCK C PYRAMID TEMPLE APT KENCHANAHALLI, RAJARAJESHWARINA GAR, BENGALURU.	Plot No 29 A5, 4th Phase, Dobbaspet Industrial Area, Bangalore Rural District	Ursodeoxyc holic and Acid Tablets 300 MG, Ursodeoxyc holic acid suspension	3-Aug-16	93	66	200	10	2016-17

28	SLSWCC	SRIYA FARMS AND FEEDS PVT LTD. 80 FT ROAD, 2ND BLOCK, HBR LAYOUT, BANGALORE – 43	Jakkasandra Village, Malur Taluk, Kolar District	Hatchery	3-Aug-16	93	24.26	70	2.22	2016-17
29	SLSWCC	ZAKINL BIOTECH PVT LTD BANASHANKARI, 1ST STAGE, BANGALORE 1652/23, 16TH MAIN, 5TH A CROSS, BANGALORE.	Thimmegowdanapalya Village Santhemaralli, Chamarajanagara Taluk, District and Kadakola Village Mysore District	Agro Herbs Processing - Distillation - Freezing - Solvent Super Critical Extraction &Formulation Space	3-Aug-16	93	67.8	55	150	2016-17
30	SLSWCC	CBM ENTERPRISES 'Chandrashekar Mansion', Opp. KSRTC Depot, Hosur, Hubli - 580 021	Devasamudra Village, Molakalmuru Taluk, Chitradurga District	3 MW Solar Power Plant	27-Sep-16	94	24	10	16.2	2016-17
31	SLSWCC	NETALKAR POWER TRANSMISSION PLANT S.No.350, Khanapur Road, Udyambag, Belgaum.	Majgaon, Belgaum Taluk & District.	Crank shaft for Tractors & Automobiles	27-Sep-16	94	22.5	2	6070.29 Sq. mtrs.	2016-17
32	SLSWCC	SHRI KESHAV CEMENTS AND INFRA LTD Nazar Camp, Karbhar Galli,, Vadgaon, Belgaum -590005	Naganapur Village, Mudhol Taluk, Bagalkot District	Cement 43 Grade	27-Sep-16	94	205.91	20	68.7	2016-17
33	SLSWCC	Chikku Energy Private Limited Basavanagudi, K.R. Road, Bangalore - 560004	Devasamudra Village, Molakalmur Taluk, Chitradurga District	3 MW grid connected Solar Photovoltaic Based Power Plant	7-Nov-16	95	24	10	19.1	2016-17
34	SLSWCC	RGA Infrastructure No.366, 1st cross Road, 3rd Block, Koramangala, Bangalore -560034	Chikkakannelli, Bangalore East Taluk, Bangalore Urban District	IT/ITES SEZ	7-Nov-16	95	182.47	4700	3.37	2016-17
35	SLSWCC	Megha Engineering and Infrastructures Limited S2 TIE,Balanagar,37, Telangana	Sy.No.84/2 of Yamanapura, Belgaum Taluk, Belgaum District	City Gas Distribution Network	20-Jan-17	96	90	80	3.5	2016-17

36	SLSWCC	Ferns Packers Plot No.133, Part-I, 90th Block,, Tarihal Industrial Area, Dharwad – 580026	Plot No.180 in Gamanagatti Industrial Area, Dharwad District.	Wooden / Plywood Packaging Boxes & Corrugated Boxes	20-Jan-17	96	16	40	2	2016-17
37	SLSWCC	Magellan Aerospace India Private Limited Unit no.201, Oxford Tower, No.139, Kodihally, Old Airport Road, Bangalore-560008	Plot Nos.69 to 81 at Aerospace SEZ, Devanahalli taluk, Bangalore Rural District	Aircraft Parts	20-Jan-17	96	189.99	400	7	2016-17
38	SLSWCC	Megha Engineering and Infrastructures Limited S2 TIE, Balanagar, Telengana – 500037	Sy. No. 138 – 3,4,5,6, 7,8,9,10 of Vakkodi Village, Tumkur Taluk and District	City Gas Distribution network	20-Jan-17	96	90	80	1.85	2016-17
39	SLSWCC	Vijaykant Dairy And Food Products Limited Mahantesh Nagarlig 159 M.M Extension Belagavi	Sy.No.236/1,238/1 of Neginhal Village, Bailhongal Taluk, Belgaum District	Milk, Ice Cream, Curd, Paneer, Flavoured Milk, Ghee	20-Jan-17	96	35	650	2.82	2016-17
40	SLSWCC	Wardha Solar Maharastra Private Limited Adani House, Near Mithakali Six Road, Navrangpura, Gujarat -380009	Modahalli Village, Lokkanahalli Hobli, Kollegala taluk, Chamarajanagara District	50 MW Solar PV Power Project	9-Feb-17	97	350	152	271.85	2016-17
41	SLSWCC	Wardha Solar Maharastra Private Limited Adani House, Near Mithakali Six Road, Navrangpura, Gujarat -380009	Modahalli Village, Lokkanahalli Hobli, Kollegala taluk, Chamarajanagara District	50 MW Solar PV Power Project	9-Feb-17	97	350	152	138.7	2016-17
42	SLSWCC	Swamy Sons Agencies Private Limited 2-2-647/77,G-14,Uppal, Baghamberpet, Hyderabad-500013	Plot No.21, 22, 23 & 24 in Gamanagatti 2nd Phase Industrial Area, Dharwad District	Warehousing and Logistics	20-Mar-17	98	20	89	4	2016-17
43	SLSWCC	JSW Steel Limited U 6th Floor, East Wing, Raheja Towers, M.G. Road, Bangalore – 560 001.	Sy.No.26/5, 27/1A/1 of Bannihatti Village, Sandur Tauk, Bellary	Raw Material Truck Terminal	20-Mar-17	98	18.5	3	11.37	2016-17

44	SLSWCC	NRS Enterprises #16, Doddarahalli, Hunukundapost, Bangarpet - 563114	Plot No.74 in Adakanahalli Industrial Area, Mysore District	Warehousing	20-Mar-17	98	15.5	25	1.2	2016-17
45	SLSWCC	Aditya Birla Solar Limited Sy. No. 12/4, Bellati Village, Shirahatti Bellati, Gadag ? 400030	Sy.Nos.58/1,64/1,57/1-1, 57/1-2,58/2,64/2, 58/3, 64/3,58/9,58/5 of Kesaragoppa Village & Sy.Nos.777/1, 777/10,777/2,777/4,777/6, 777/7, 777/8, 777/9 of Katokola Villages, Ramdurga Taluk, Belgaum District.	20 MW Solar Power Plant	20-Jun-17	100	107.87	18	93 Acres 35	2017-18
46	SLSWCC	Aditya Birla Solar Limited Sy. No. 12/4, Bellati Village, Shirahatti Bellati, Gadag ? 400030	Sy.Nos.21/1,12/4,22/4,22/5, 20/6,22/6, 22/7,22/8 of Bellahatti Village & Sy.Nos.79/1A, 79/1B, 79/2, 80/2, 81/2, 79/3, 80/3, 78/3, 78/4, 79/4, 80/4A, 78/5, 79/5 of Chikkasavanur Villages, Shirahatti Taluk, Gadag District	20 MW Solar Power Plant	20-Jun-17	100	104.3	18	82 acres 19	2017-18
47	SLSWCC	Exalt Enviroklen Private Limited Exalt, Jus Trufs, 9 Jakkur Roadjakkur Bangalore ? 560 064	Kumbarkoppa Village, Haliyal Taluk, Dandeli, Uttara Kannada District	Eco Resort	20-Jun-17	100	30	38	196	2017-18
48	SLSWCC	Aditya Birla Solar Ltd. Sy. No. 12/4, Bellati Village, Shirahatti Bellati, Gadag ? 400030	Sy.Nos.117,117/P1,117/P6, 117/P17, 117/P18, 117/P8, 117/P19, 117/P20, 117/P21, 117/P22, 117/P8, 117/P5, 117/P2, 175 and 176 of Punnyahalli village, Mulabagal Taluk, Kolar District	20 MW Solar Power Plant	28-Jul-17	101	112.83	18	75.87	2017-18
49	SLSWCC	Narayana Hrudayalaya Limited No 258/A, Bommasandra Industrial Area, Hosur Road, Bangalore - 560099	Sy.No.238/2 of Bommasandra Industrial Area, Anekal Taluk, Bengaluru Urban District	Hospital Healthcare Services	31-Aug-17	102	23.81	62	2.1	2017-18
50	SLSWCC	Krithi Enterprises No. 1031/B, 40th A Cross, 26th Main, 4th T Block, Jayanagar, Bangalore ? 560041	Obedenahalli 3rd Phase Industrial Area, Doddaballapura Taluk, Bengaluru Rural District	Food and Agro Processing with Cold Storage	31-Aug-17	102	15.66	50	2.2	2017-18

51	SLSWCC	Sterling Tools Limited SA-DLF Industrial Estate, Faridabad ? 121003	Plot 109, 109A, 109B, 110.Vemgal Industrial Area, Kolar District.	Fasteners	4-Oct-17	103	227.03	450	10.54	2017-18
52	SLSWCC	Seutic Labs Pvt. Ltd. Industrial Areahumnabad Bidar - 585330	Humanabad Industrial Area, Bidar District	Bulk drugs Intermediates and API	4-Oct-17	103	15.3	87	2	2017-18
53	SLSWCC	Athani Sugars Ltd. Vishnunagar, Navalihal Post, Athani Taluk, Belagavi District	Vishnuannanagar (Madhbhavi) Village, PO, Navalihal, Athani Taluk, Belgaum	Sugar Plant from 4500 TCD to 10500 TCD	4-Oct-17	103	187.61	250	0	2017-18
54	SLSWCC	Mahindra Electric Mobility Limited No 66, road no.3, Jigani link road, Bommasandra Industrial Estate, Bengaluru -560 099	Sy.No.26/9, Yarandahalli Village, Anekal Taluk, Bengaluru Urban District	Electric Vehicles and their components	15-Nov-17	104	70	1500	1.27	2017-18
55	SLSWCC	Best Steel Logistics Limited L-506,Agrasen Apartment, Plot No 66, I.P Extension Delhi-110092	Plot No.53 (Part) in Malur 4th Phase Industrial Area, Kolar District	Manufacturing of In-Line Galvanized Steel Tubes & Pipes	30-Dec-17	105	180.5	100	13	2017-18
56	SLSWCC	Diamond Metal Screen Private Limited Plot No.26, Rs No.336/1, Majagaonudyambag Belagavi	Plot No.25, Sy.No.336/1 in Mazagao Village, Belagavi Taluk and District	Ferrous and Non Ferrous Perforated Metals	30-Dec-17	105	15.53	35	0.93	2017-18
57	SLSWCC	South India Cements Limited 6-3-668/10/66 Durganagar Colopny,punjagutta Hyderabad – 500082	Sy.No.367 in Mulked Village, Sedam Taluk, Gulbarga District	Cement Plant capacity from 200 TPD to 600 TPD	27-Feb-18	108	72.07	300	160	2017-18
58	SLSWCC	Internormen Filters Private Limited (new name Eaton Industrial Products Pvt. Ltd.) EON Free Zone, Cluster B, Wing 3, Plot No.1, Sy.No. 77, MIDC Kharadi Knowledge Park, Pune - 411 014	Plot Nos.91,92,53,54 & 55 in Aerospace SEZ, Bengaluru	Hoses and couplings	1-Aug-18	111	50.5	109	2.75	2018-19

59	SLSWCC	Venkateshwara Power Projects Ltd. Nippani-Ichalkaranji Road, Bedkihal, Belagavi – 591 214	30 acres 27 guntas of land purchased U/s 109 of KLR Act in Sy.Nos.85,168,164/2B, 164/4K, 164/7K, 166/1A, 167/2, 169/1, 169/2, 169/3, 170/2B, 170/3, 84/1B of Bedakihal Village, Chikkodi Taluk, Belgaum District	Expansion of Sugar Plant capacity from 5000 TCD to 12000 TCD, Expansion of Co-gen capacity from 23 MW to 59 MW and establishment of 90 KLPD Distillery	1-Aug-18	111	362.33	389	30.67	2018-19
	Sub Total						**6232.07**	**16438**		
	TOTAL						**9781.07**	**30638**		

<u>**ಕರ್ನಾಟಕ ಸರ್ಕಾರ**</u>

ಸಂಖ್ಯೆ: HORTI 132 HGM 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿ: 19-3-2020

ಇವರಿಂದ:

ಸರ್ಕಾರದ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಇವರಿಗೆ:

ಕಾರ್ಯದರ್ಶಿಯವರು
ಕರ್ನಾಟಕ ವಿಧಾನ ಸಭಾ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಶ್ರೀ ಟಿ.ರಘುಮೂರ್ತಿ, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ: 2246 ರ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಶ್ರೀ ಟಿ.ರಘುಮೂರ್ತಿ, ವಿಸಸ, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ: 2246 ಕ್ಕೆ ತೋಟಗಾರಿಕೆ ಇಲಾಖೆಯ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

(ಜಿ.ಎಸ್.ಪ್ರಸನ್ನಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 2246

ಸದಸ್ಯರ ಹೆಸರು : ಶ್ರೀ ರಘುಮೂರ್ತಿ ಟಿ.

ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸುವ ದಿನಾಂಕ : 20.03.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ನಗರಕ್ಕೆ ಪ್ರತಿನಿತ್ಯ ಗ್ರಾಮೀಣ ಭಾಗದಿಂದ ರೈತರು ಬೆಳೆದ ಹೂವುಗಳನ್ನು ಮಾರಾಟ ಮಾಡಲು ಬರುತ್ತಿದ್ದು, ಸರಿಯಾದ ಮಾರುಕಟ್ಟೆ ಇಲ್ಲದೆ ರಸ್ತೆ ಬದಿ ನಿಂತು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಹಾಗಿದ್ದಲ್ಲಿ, ಬರಗಾಲ ಪೀಡಿತ ಚಳ್ಳಕೆರೆ ತಾಲ್ಲೂಕಿನ ಗ್ರಾಮೀಣ ಭಾಗದ ರೈತರು ಬೆಳೆದ ಹೂವುಗಳನ್ನು ಮಾರಾಟ ಮಾಡಲು ನಗರದಲ್ಲಿ ಸುಸಜ್ಜಿತವಾದ ಹೂವಿನ ಮಾರುಕಟ್ಟೆಯನ್ನು ನಿರ್ಮಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು (ಸಂಪೂರ್ಣ ಮಾಹಿತಿ ನೀಡುವುದು)?	ಚಳ್ಳಕೆರೆಯಲ್ಲಿ ಸಾಂಪ್ರದಾಯಿಕ ಹೂವುಗಳಾದ ಸೇವಂತಿಗೆ, ಸುಗಂಧರಾಜ, ಚೆಂಡುಹೂ, ಮಲ್ಲಿಗೆ, ಗುಲಾಬಿ, ಕನಕಾಂಬರ ಮತ್ತು ಆಸ್ಟರ್ ಸೇರಿದಂತೆ 374.00 ಹೆಕ್ಟೇರ್ ಗಳಲ್ಲಿ ವಿವಿಧ ಪುಷ್ಪಗಳನ್ನು ಬೆಳೆಯಲಾಗುತ್ತಿದೆ. ಈ ಮಟ್ಟದ ಪುಷ್ಪ ಉತ್ಪಾದನೆ ಪ್ರದೇಶಗಳಲ್ಲಿ ಪ್ರತ್ಯೇಕ ಹೂವಿನ ಮಾರುಕಟ್ಟೆಯನ್ನು ನಿರ್ಮಾಣ ಮತ್ತು ನಿರ್ವಹಣೆ ಮಾಡುವುದು ಕಾರ್ಯಸಾಧ್ಯವಾದುದಲ್ಲ. ಆದ್ದರಿಂದ ಹೂವಿನ ಮಾರುಕಟ್ಟೆಯನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: HORTI 132 HGM 20

(ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು

ರೇಷ್ಮೆ ಸಚಿವರು

66

20/3

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ34ಎಲ್‌ಎಕ್ಯೂ / ~~ಎಲ್‌ಸಿಕ್ಯೂ~~ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 19-03-2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್,~~
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ [illegible] ಇವರ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ:2646ಕ್ಕೆ ಉತ್ತರ ನೀಡುವ ಬಗ್ಗೆ.

.----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ/ ~~ಪರಿಷತ್ತಿನ~~ ಸದಸ್ಯರಾದ ಶ್ರೀ . [illegible] ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ:2646.. ಕ್ಕೆ ಉತ್ತರವನ್ನು ತಯಾರಿಸಿದ್ದು, ಇದರ 100 ಪ್ರತಿಗಳನ್ನು ಇದರೊಂದಿಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

19/3
(ವಿ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2646
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ. (ಉಡುಪಿ)
ಉತ್ತರಿಸುವ ದಿನಾಂಕ	:	20.03.2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಉಡುಪಿ ಜಿಲ್ಲೆಯ ಬ್ರಹ್ಮಾವರವನ್ನು ಪುರಸಭೆಯನ್ನಾಗಿ ಘೋಷಣೆ ಮಾಡಲು ಆದೇಶಿಸಿರುವುದು ಸರ್ಕಾರದ ಗಮನದಲ್ಲಿದೆಯೇ;	ಉಡುಪಿ ಜಿಲ್ಲೆ ಬ್ರಹ್ಮಾವರ ಪರಿಸರದ ಚಾಂತಾರು, ಹೇರೂರು ಹಾಗೂ ವಾರಂಬಳ್ಳಿ ಗ್ರಾಮ ಪಂಚಾಯಿತಿಗಳನ್ನು ಒಟ್ಟುಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಕರ್ನಾಟಕ ಪುರಸಭೆಗಳ ಅಧಿನಿಯಮ 1964ರನ್ವಯ ಪರಿಶೀಲನೆಯಲ್ಲಿರುತ್ತದೆ. ಮುಂದುವರೆದು, ಬ್ರಹ್ಮಾವರ ತಾಲ್ಲೂಕು ಕೇಂದ್ರ ಭಾಗದಲ್ಲಿನ ಹಂದಾಡಿ, ಚಾಂತಾರು, ವಾರಂಬಳ್ಳಿ ಮತ್ತು ಹಾಡಿ ಇವುಗಳನ್ನು ಜೊತೆಗೂಡಿಸಿ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
(ಆ)	ಯಾವಾಗ ಬ್ರಹ್ಮಾವರವನ್ನು ಪುರಸಭೆಯನ್ನಾಗಿ ಘೋಷಣೆ ಮಾಡಲಾಗುವುದು? (ವರದಿ ನೀಡುವುದು)	ಬ್ರಹ್ಮಾವರವನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಮುಂದುವರೆದು, ಕೇಂದ್ರ ಜನಗಣತಿ ನಿರ್ದೇಶನಾಲಯ, ಭಾರತ ಸರ್ಕಾರದ ದಿನಾಂಕ:16.09.2019ರ ಪತ್ರದನ್ವಯ 2020ರ ಜನಗಣತಿ ಕಾರ್ಯಾಚರಣೆಯ ಅವಧಿಯಾದ ದಿನಾಂಕ:01.01.2020 ರಿಂದ 31.03.2021ರವರೆಗೆ ಹಾಲಿ ಅಸ್ತಿತ್ವದಲ್ಲಿರುವ ತಾಲ್ಲೂಕುಗಳು, ಗ್ರಾಮ ಪಂಚಾಯಿತಿಗಳು, ಮುನಿಸಿಪಾಲಿಟಿಗಳ ಆಡಳಿತಾತ್ಮಕ ಗಡಿಗಳನ್ನು (Administrative Boundaries) ಮಾರ್ಪಾಡು ಮಾಡದಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿರುತ್ತದೆ. ಪ್ರಸ್ತುತ ಗ್ರಾಮ ಪಂಚಾಯಿತಿಗಳನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಅವಕಾಶವಿರುವುದಿಲ್ಲ.

ಸಂಖ್ಯೆ: ನಅಇ 34 ಎಲ್‌ಎಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 54 ಇಎನ್‌ವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 19.03.2020.

ಇಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
(ಜೀವಿಪರಿಸ್ಥಿತಿ ಮತ್ತು ಪರಿಸರ),
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

(67) 20/3 U/S 20/3/2020

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ. ರಘುಪತಿ ಭಟ್ ಕೆ (ಉಡುಪಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2647 ಕ್ಕೆ ಉತ್ತರ ಕಳುಹಿಸುತ್ತಿರುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2647/ 2020, ದಿನಾಂಕ: 07.03.2020.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ. ರಘುಪತಿ ಭಟ್ ಕೆ (ಉಡುಪಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2647 ಕ್ಕೆ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

19/3/2020
(ಮುರಳೀಧರ ಎಸ್. ತಳ್ಳಿಕೇರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಜೀವಿಪರಿಸ್ಥಿತಿ ಮತ್ತು ಪರಿಸರ)

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2647
2. ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)
3. ಉತ್ತರಿಸಬೇಕಾದ ದಿನಾಂಕ : 20.03.2020
4. ಉತ್ತರಿಸಬೇಕಾದ ಸಚಿವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕರಾವಳಿ ಪ್ರದೇಶದಲ್ಲಿ CRZ ವ್ಯಾಪ್ತಿಯಲ್ಲಿ ಮರಳು ದಿಬ್ಬ ತೆರವುಗೊಳಿಸಲು ಕೇಂದ್ರ ಸರ್ಕಾರದ 2011 ರ ನೋಟಿಫಿಕೇಶನ್ ಅವಧಿ 10 ವರ್ಷವಿರುವುದು ಸರ್ಕಾರದ ಗಮನದಲ್ಲಿದೆಯೇ	ಕೇಂದ್ರ ಸರ್ಕಾರವು ಹೊರಡಿಸಿರುವ 2011 ರ CRZ ನೋಟಿಫಿಕೇಶನ್ ನಲ್ಲಿ ಕರಾವಳಿ ಪ್ರದೇಶದಲ್ಲಿ CRZ ವ್ಯಾಪ್ತಿಯಲ್ಲಿ ಮರಳು ದಿಬ್ಬ ತೆರವುಗೊಳಿಸಲು 10 ವರ್ಷದ ಅವಧಿಯನ್ನು ನಿಗಧಿಪಡಿಸಿರುವುದಿಲ್ಲ. ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ 06.01.2011 ರಂದು ಜಾರಿಗೆ ತಂದಿದ್ದ 2011 ರ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯನ್ನು ಅಧಿಕ್ರಮಿಸಿ ಅಧಿಸೂಚನೆ ಸಂಖ್ಯೆ: GSR 37(E), ದಿನಾಂಕ: 18.01.2019 ರಲ್ಲಿ ಹೊಸ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2019 ಅನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯಲ್ಲಿ, ಈಗಾಗಲೇ CRZ ಅಧಿಸೂಚನೆ 2011 ರ ಅನುಸಾರ ತಯಾರಿಸಿ ಕೇಂದ್ರ ಸರ್ಕಾರ ದಿಂದ ಅನುಮೋದಿಸಲ್ಪಟ್ಟ CZMP ಯೋಜನೆಯನ್ನು ಈ ಹೊಸ ಅಧಿಸೂಚನೆಯ ಪ್ರಕಾರ ಪರಿಷ್ಕರಿಸಿ ಅನುಮೋದನೆ ಪಡೆಯುವವರೆಗೆ 2011 ರ ಅಧಿಸೂಚನೆಯನ್ನು ಅನುಸರಿಸುವಂತೆ ತಿಳಿಸಲಾಗಿರುತ್ತದೆ.
ಆ)	ಇದನ್ನು ಮತ್ತೆ ನವೀಕರಿಸಲು ಕೇಂದ್ರ ಸರ್ಕಾರಕ್ಕೆ ಯಾವಾಗ ಪ್ರಸ್ತಾವನೆ ಸಲ್ಲಿಸಲಾಗುವುದು:	ಉದ್ಭವಿಸುವುದಿಲ್ಲ.
ಇ)	ಉಡುಪಿ ಜಿಲ್ಲೆಯಲ್ಲಿ CRZ ವ್ಯಾಪ್ತಿಯ Eco Sensitive Zone ಗುರುತಿಸುವಲ್ಲಿ ತಪ್ಪಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಇಲ್ಲ. ಕೇಂದ್ರ ಪರಿಸರ, ಅರಣ್ಯ ಮಂತ್ರಾಲಯದ ಅಂಗ ಸಂಸ್ಥೆಯಾದ NCSCM ಚೆನ್ನೈ ಸಂಸ್ಥೆಯು CRZ - 2011 ರ ಅಧಿಸೂಚನೆಯ ಅನುಸಾರ ಕರಾವಳಿ ನಿಯಂತ್ರಿತ ಪ್ರದೇಶವನ್ನು ಅಧಿಸೂಚನೆಯ ವ್ಯಾಖ್ಯಾನದ ಅನುಸಾರ ವಿವಿಧ ವಲಯಗಳಾಗಿ ವರ್ಗೀಕರಿಸಿ, ಈ ವಲಯಗಳ ನಿರ್ವಹಣೆ ಮತ್ತು ವಿವಿಧ ಚಟುವಟಿಕೆಗಳನ್ನು ನಿಯಂತ್ರಣ ಮಾಡುವ ಉದ್ದೇಶದಿಂದ CZMP ಯನ್ನು ತಯಾರಿಸಿದ್ದು, ಕೇಂದ್ರ ಮಂತ್ರಾಲಯವು 2018 ರಲ್ಲಿ ಇದನ್ನು ಅನುಮೋದಿಸಿರುತ್ತದೆ.
ಈ)	ಬಂದಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಕಡತ ಸಂಖ್ಯೆ: ಅಪಜೀ 54 ಇಎನ್ ವಿ 2020

19/03/2020

(ಆನಂದ್ ಸಿಂಗ್)

ಕರ್ನಾಟಕ ಸರ್ಕಾರ

ಸಂಖ್ಯೆ ಸಿಐ 167 ಎಂಎಂಎನ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ 19.03.2020.

68 US
20/3/2020

ಇಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ., ಜವಳಿ ಮತ್ತು ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ

ಮಾನ್ಯರೇ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಘುಪತಿ ಭಟ್ (ಉಡುಪಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2648ಕ್ಕೆ ಉತ್ತರ ಒದಗಿಸುವ ಕುರಿತು.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2648/ ದಿನಾಂಕ 09.03.2020.

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ಮಾನ್ಯ ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಘುಪತಿ ಭಟ್ (ಉಡುಪಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2648ಕ್ಕೆ ಸರ್ಕಾರದ ಉತ್ತರದ 100 ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಶಿವಪ್ರಕಾಶ)
ಪೀಠಾಧಿಕಾರಿ (ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2648
ಸದಸ್ಯರ ಹೆಸರು	ಶ್ರೀ ರಘುಪತಿ ಭಟ್ .ಕೆ (ಉಡುಪಿ)
ಉತ್ತರಿಸಬೇಕಾದ ದಿನಾಂಕ	20.03.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರ
ಅ.	ಸರ್ಕಾರದ ಹೊಸ ಮರಳು ನೀತಿಯಲ್ಲಿ ಕರಾವಳಿಗೆ ಪ್ರತ್ಯೇಕ ನೀತಿಯ ಬಗ್ಗೆ ಸರ್ಕಾರದ ನಿಲುವೇನು; ಇತ್ತೀಚೆಗೆ ಶಾಸಕರು ಮತ್ತು ಅಧಿಕಾರಿಗಳು ಗುಜರಾತ್ ಪ್ರವಾಸ ಕೈಗೊಂಡು ನೀಡಿದ ವರದಿಯ ಫಲಶ್ರುತಿಯೇನು;	ರಾಜ್ಯದಲ್ಲಿ ಮರಳು ನೀತಿ ಜಾರಿಗೆ ತರುವ ಕುರಿತು ರೂಪುರೇಷೆಗಳನ್ನು ಸರ್ಕಾರದಿಂದ ಸಿದ್ದಪಡಿಸಲಾಗುತ್ತಿದೆ. ಸರ್ಕಾರದ ಆದೇಶದಂತೆ, ಕರಾವಳಿ ಭಾಗದ ಶಾಸಕರು ಮತ್ತು ಅಧಿಕಾರಿಗಳ ತಂಡವು ಗುಜರಾತ್ ರಾಜ್ಯದಲ್ಲಿ ಉಪಖನಿಜಗಳ ನಿರ್ವಹಣೆಯ ಕುರಿತು ಇರುವ ನೀತಿ ನಿಯಮಗಳನ್ನು ಅಧ್ಯಯನ ನಡೆಸಿ, ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿರುತ್ತದೆ.
ಆ.	ಕರಾವಳಿಯ CRZ ವ್ಯಾಪ್ತಿಯ ಸಾಂಪ್ರದಾಯಿಕ ಮರಳು ಕಾರ್ಮಿಕರಿಗೆ ನೀಡಿದಂತೆ Non CRZ ಸಾಂಪ್ರದಾಯಿಕ ಕಾರ್ಮಿಕರು 2013 ರ ಮೊದಲು ಸಾಂಪ್ರದಾಯಿಕವಾಗಿ ಮರಳು ದಿಬ್ಬ ತೆರವುಗೊಳಿಸುತ್ತಿದ್ದ ಮಾದರಿಯಲ್ಲಿ ಕರಾವಳಿಗೆ ಹೊಸ ನೀತಿ ಮಾಡಲು ಸರ್ಕಾರದ ನಿಲುವೇನು;	ರಾಜ್ಯದಲ್ಲಿ ಸುಲಭವಾಗಿ ಕೈಗೆಟಕುವ ದರದಲ್ಲಿ ಸಾರ್ವಜನಿಕರಿಗೆ ಮರಳನ್ನು ಪೂರೈಕೆ ಮಾಡುವ ಸಂಬಂಧ ರಾಜ್ಯ ಸರ್ಕಾರವು ಹೊಸ ಮರಳು ನೀತಿ ಜಾರಿಗೆ ತರುವ ಕುರಿತು ರೂಪುರೇಷೆಗಳನ್ನು ಸಿದ್ದಪಡಿಸುತ್ತಿದೆ.
ಇ.	2012 ರ ಮರಳು ನೀತಿ ಜಾರಿ ಆದ ದಿನದಿಂದಲೂ ಈ ಬಗ್ಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ, ಸುಸ್ಥಿರ ಮರಳು ಗಣಿಗಾರಿಕೆ ನಿರ್ವಹಣೆ ಮಾರ್ಗಸೂಚಿಗಳು, 2016 ರಂತೆ, ಪರಿಸರ ಅನುಮತಿ ಪತ್ರದಲ್ಲಿನ ಷರತ್ತಿನಂತೆ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-R ರ ಉಪನಿಯಮ 17 ರಂತೆ In stream ನಲ್ಲಿ ಮರಳು ಗಣಿಗಾರಿಕೆಯನ್ನು ನಿಷೇಧಿಸಲಾಗಿರುತ್ತದೆ.

--2

ಈ.	ಕರಾವಳಿ ಭಾಗದಲ್ಲಿ Non CRZ ವ್ಯಾಪ್ತಿಯಲ್ಲಿ ನೀರಿನ ಮರಳನ್ನು ತೆಗೆಯುವುದರಿಂದ ಪ್ರವಾಹ ನಿಯಂತ್ರಣ ಮಾಡಬಹುದು ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಮರಳು ಉತ್ಕೃಷ್ಟವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು)	ನದಿ ಪಾತ್ರದಲ್ಲಿ ಮರಳನ್ನು ತೆಗೆಯುವುದರಿಂದ ಮಳೆಗಾಲದಲ್ಲಿ ವಾಡಿಕೆ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆ ಆದಲ್ಲಿ ನದಿಯಲ್ಲಿನ ಪ್ರವಾಹವು ನಿಯಂತ್ರಣವಾಗುವ ಸಾಧ್ಯತೆ ಇರುತ್ತದೆ. ಸದರಿ ನೀರಿನ ತಳಭಾಗದಲ್ಲಿ ದೊರೆಯುವ ಮರಳು ಉತ್ತಮ ಗುಣಮಟ್ಟದ್ದಾಗಿರುತ್ತದೆ. ಆದರೆ, ಸುಸ್ಥಿರ ಮರಳು ಗಣಿಗಾರಿಕೆ ನಿರ್ವಹಣೆ ಮಾರ್ಗಸೂಚಿಗಳು, 2016 ರಂತೆ, ಪರಿಸರ ಅನುಮತಿ ಪತ್ರದಲ್ಲಿನ ಷರತ್ತಿನಂತೆ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-R ರ ಉಪ ನಿಯಮ 17 ರಂತೆ ನದಿ ನೀರಿನ ತಳಭಾಗದಿಂದ ಮರಳು ತೆಗೆಯುವುದನ್ನು (In stream Sand Mining) ನಿಷೇಧಿಸಿದೆ.

ಸಂಖ್ಯೆ: ಸಿಐ 167 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ಸರ್ಕಾರ

ಸಂ: ನಅಇ 92 ಪಿಆರ್‌ಜೆ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:20-03-2020

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2649
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ. (ಉಡುಪಿ)
ಉತ್ತರಿಸುವ ದಿನಾಂಕ	:	20.03.2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದು, ಅಧ್ಯಕ್ಷ/ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಯಬೇಕಾಗಿರುವ ಸಂಸ್ಥೆಗಳೆಷ್ಟು; (ವಿವರ ನೀಡುವುದು)	ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಿಗೆ ವಾರ್ಡುವಾರು ಚುನಾವಣೆ ನಡೆದು, ಅಧ್ಯಕ್ಷರು/ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಯಬೇಕಾಗಿರುವ ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ 239 (ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ)
ಆ)	ಈ ಬಗ್ಗೆ ನ್ಯಾಯಾಲಯದ ಆದೇಶವೇನು; (ವಿವರ ನೀಡುವುದು)	ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ 9ನೇ ಅವಧಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿಯನ್ನು ಸಂಖ್ಯೆ:ನಅಇ 82 ಎಂಎಲ್‌ಆರ್ 2018(1)(2)(3), ದಿನಾಂಕ:03.09.2018ರಲ್ಲಿ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಈ ಮೀಸಲಾತಿ ಅಧಿಸೂಚನೆಗಳನ್ನು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು/ ಧಾರವಾಡ/ಕಲಬುರ್ಗಿ ಇಲ್ಲಿ ಪ್ರಶ್ನಿಸಿದ್ದು, ಧಾರವಾಡ ಪೀಠವು ರಿಟ್ ಅರ್ಜಿ ಸಂಖ್ಯೆ:105750-754/2018 ಹಾಗೂ ಇತರೇ ಪ್ರಕರಣಗಳಲ್ಲಿ ದಿನಾಂಕ: 10.09.2018ರಂದು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2650
2. ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)
3. ಉತ್ತರಿಸಬೇಕಾದ ದಿನಾಂಕ : 20-03-2020
4. ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರಮ. ಸಂಖ್ಯೆ	ಪ್ರಶ್ನೆ	ಉತ್ತರ
